# ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

**ದಿನಾಂಕ:19.08.2009 ರಂದು ಬುಧವಾರ ಪೂರ್ವಾಹ್ನ 11.00 ಗಂಟೆಗೆ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ಜರುಗಿದ ಸಾಮಾನ್ಯ ಸಭೆಯ ನಡವಳಿಗಳು**

ಸಂಖ್ಯೆ:ಬಮನಪಾಬ/ಮೀ/5(10)/2009

## ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು

**ಶ್ರೀಯುತರು**

1) ಕೆ.ಬಸವರಾಜ್, ಮಹಾಪೌರರು
2) ವಿಜಯಮ್ಮ, ಉಪಮಹಾಪೌರರು
3) ಇಬ್ರಾಹಿಂ, ಅಧ್ಯಕ್ಷರು, ತೆರಿಗೆ ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ
4) ಜಿ.ಪದ್ಮಾವತಿ, ಅಧ್ಯಕ್ಷರು,ಸಾರ್ವಜನಿಕ ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ.
5) ಗೋವಿಂದ, ಅಧ್ಯಕ್ಷರು, ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ.
6) ಕೆ.ಎಸ್.ದಿವಾಕರ್,ಅಧ್ಯಕ್ಷರು, ಲೆಕ್ಕ ಪತ್ರ ಸ್ಥಾಯಿ ಸಮಿತಿ.
7) ಲತಾ.ಆರ್, ಸದಸ್ಯರು
8) ಬಾದುಲ್ಲಾ, ಸದಸ್ಯರು
9) ಅಬ್ದುಲ್ ಕಲೀಂ, ಸದಸ್ಯರು
10) ಪಿ.ವಲಿಸಾಬ್, ಸದಸ್ಯರು
11) ಬಿ.ಲಕ್ಷ್ಮೀ ಸದಸ್ಯರು
12) ನಾರಾಯಣಮ್ಮ, ಸದಸ್ಯರು
13) ಮರಿದೇವಯ್ಯ.ವಿ.ಎಸ್. ಸದಸ್ಯರು
14) ಸಿದ್ದನಗೌಡ, ಸದಸ್ಯರು
15) ಎನ್.ಕುಮಾರ್ ಸ್ವಾಮಿ, ಸದಸ್ಯರು
16) ಎ.ಪದ್ಮಾವತಿ, ಸದಸ್ಯರು
17) ಕವಿತ, ಸದಸ್ಯರು
18) ಬಿ.ಶೋಭ, ಸದಸ್ಯರು
19) ಎಸ್.ಮಲ್ಲನಗೌಡ, ಸದಸ್ಯರು
20) ಕೆ.ಶಶಿಕಲಾ, ಸದಸ್ಯರು

**ಶ್ರೀಯುತರು**

21) ಹೆಚ್.ಹುಲಿರಾಜ್, ಸದಸ್ಯರು
22) ಶಮ್‌ಶಾದ್ ಬೇಗಂ, ಸದಸ್ಯರು
23) ಹಸೀನಾಬೀ, ಸದಸ್ಯರು
24) ನೀಲಾವತಿ, ಸದಸ್ಯರು
25) ವಿ.ನಟರಾಜ್, ಸದಸ್ಯರು
26) ಜೆ.ಚಂದ್ರ, ಸದಸ್ಯರು
27) ತೋರ್ಪು ಯಲ್ಲಪ್ಪ, ಸದಸ್ಯರು
28) ಕೆ.ಬಿ.ವೆಂಕಟೇಶ್ವರ, ಸದಸ್ಯರು
29) ರಾಜು, ಸದಸ್ಯರು
30) ಹನುಮಂತಪ್ಪ.ಕೆ. ಸದಸ್ಯರು

**ನಾಮನಿರ್ದೇಶಿತ ಸದಸ್ಯರು**

31) ಬಿ.ಬಾಲರಾಜು
32) ಸೊಂತ ಗಿರಿಧರ್
33) ಕೆ.ನೇಮಿಕಲ್ ರಾವ್
34) ದೊಂಗರ್ ಚಂದ ಜೈನ್
35) ವಿ.ವಿಜಯಕುಮಾರ್

**ಸ್ಥಳೀಯ ಶಾಸಕರು**

36) ಜಿ.ಸೋಮಶೇಖರ ರೆಡ್ಡಿ, ಅಧ್ಯಕ್ಷರು, ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳಿ ಮತ್ತು ಬಳ್ಳಾರಿ ನಗರ ಶಾಸಕರು

## ಗೈರು ಹಾಜರಾದ ಸದಸ್ಯರುಗಳು

**ಶ್ರೀಯುತರು**

1) ವೈ.ಬಿ.ಸೀತಾರಾಮ್, ಸದಸ್ಯರು
2) ಮುನ್ನಬೀ, ಸದಸ್ಯರು
3) ಎ.ಎಂ.ಸಂಜಯ, ಸದಸ್ಯರು
4) ನೂರ್ ಜಹಾನ್, ಸದಸ್ಯರು

**ಶ್ರೀಯುತರು**

5) ಜಿ.ಜನಾರ್ಧನ ರೆಡ್ಡಿ ಸನ್ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು.
6) ಬಿ.ಶ್ರೀರಾಮುಲು ಸನ್ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
7) ಜೆ.ಶಾಂತ, ಸನ್ಮಾನ್ಯ ಲೋಕಸಭಾ ಸದಸ್ಯರು
8) ಎನ್.ತಿಪ್ಪಣ್ಣ, ಸನ್ಮಾನ್ಯ ಶಾಸಕರು ವಿಧಾನ ಪರಿಷತ್
9) ಕೆ.ಸಿ.ಕೊಂಡಯ್ಯ, ಸನ್ಮಾನ್ಯ ಶಾಸಕರು ವಿಧಾನ ಪರಿಷತ್

| | | |
|---|---|---|
| **ಹಾಜರಿದ್ದ ಸದಸ್ಯರ ಸಂಖ್ಯೆ** | : | **36** |
| **ಗೈರು ಹಾಜರಾದ ಸದಸ್ಯರ ಸಂಖ್ಯೆ** | : | **09** |
| **ಖಾಲಿ** | : | **01** |
| **ಒಟ್ಟು** | : | **46** |

…2

## ನಡವಳಿಗಳು

ಪ್ರಥಮವಾಗಿ ಇಂದಿನ ಸಭೆಗೆ ಆಗಮಿಸಿರುವಂತಹ ಕರ್ನಾಟಕ ರಾಜ್ಯ ಹಾಲು ಒಕ್ಕೂಟ ಮಹಾಮಂಡಳಿಯ ಅಧ್ಯಕ್ಷರು ಮತ್ತು ಬಳ್ಳಾರಿ ನಗರ ಶಾಸಕರಾದ ಶ್ರೀ ಜಿ.ಸೋಮಶೇಖರ ರೆಡ್ಡಿಯವರಿಗೆ, ಮಹಾಪೌರರಾದ ಶ್ರೀ ಕೆ.ಬಸವರಾಜ್ ಇವರಿಗೆ ಉಪಮಹಾಪೌರರಾದ ಶ್ರೀಮತಿ ವಿಜಯಮ್ಮ ಇವರಿಗೆ ನಾಲ್ಕು ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ ಪಾಲಿಕೆಯ ಎಲ್ಲಾ ಸದಸ್ಯರುಗಳಿಗೆ ವಿವಿಧ ಇಲಾಖೆಗಳಿಂದ ಬಂದಿರುವ ಎಲ್ಲಾ ಅಧಿಕಾರಿಗಳಿಗೆ ಪತ್ರಿಕಾ ಮತ್ತು ದೃಶ್ಯ ಮಾಧ್ಯಮದವರಿಗೆ ಪಾಲಿಕೆ ಆಯುಕ್ತರಾದ ಶ್ರೀ ಎಂ.ತಿಮ್ಮಪ್ಪ ಇವರು ಸ್ವಾಗತ ಕೋರಿದರು.

**ವಿಷಯ ಸಂಖ್ಯೆ:214**

ದಿನಾಂಕ:15.06.2009ರಂದು ಜರುಗಿದ ಸಾಮಾನ್ಯ ಸಭೆಯ ಮತ್ತು 27.06.2009ರಂದು ಜರುಗಿದ ತುರ್ತು ಸಭೆಯ ನಡವಳಿಗಳನ್ನು ಓದಿ ಖಾಯಂಗೊಳಿಸುವ ಬಗ್ಗೆ. (ನಡವಳಿಗಳ ಪ್ರತಿ ಲಗತ್ತಿಸಿದೆ).

**ಠರಾವು ಸಂಖ್ಯೆ:214:**

ದಿನಾಂಕ:15.06.2009 ರಂದು ಜರುಗಿದ ಸಾಮಾನ್ಯ ಸಭೆಯ ಮತ್ತು ದಿನಾಂಕ:27.06.2009 ರಂದು ಜರುಗಿದ ತುರ್ತು ಸಭೆಯ ನಡವಳಿಗಳನ್ನು ಓದಿ ಸಭೆಯು ಸರ್ವಾನುಮತದಿಂದ ಖಾಯಂಗೊಳಿಸಿತು.

**ವಿಷಯ ಸಂಖ್ಯೆ:215**

ದಿನಾಂಕ:01.06.2009 ರಂದು ಜರುಗಿದ ನಾಲ್ಕು ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆ ಸಭೆಯ ನಡವಳಿಗಳನ್ನು ಮತ್ತು ದಿನಾಂಕ:25.06.2009 ರಂದು ಜರುಗಿದ ಲೆಕ್ಕ ಪತ್ರ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅವಲೋಕಿಸಿ ದೃಢೀಕರಿಸುವುದು. (ನಡವಳಿಗಳ ಪ್ರತಿ ಲಗತ್ತಿಸಿದೆ).

**ಠರಾವು ಸಂಖ್ಯೆ:215**

ದಿನಾಂಕ:01.06.2009 ರಂದು ಜರುಗಿದ ನಾಲ್ಕು ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆ ಸಭೆಯ ಮತ್ತು ದಿನಾಂಕ:25.06.2009 ರಂದು ಜರುಗಿದ ಲೆಕ್ಕ ಪತ್ರ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಸಭೆಯು ಅವಲೋಕಿಸಿ ಸರ್ವಾನುಮತದಿಂದ ದೃಢೀಕರಿಸಿತು.

**ವಿಷಯ ಸಂಖ್ಯೆ:216:**

2009ರ ಮೇ ಮತ್ತು ಜೂನ್ ತಿಂಗಳುಗಳ ಜಮಾ ಖರ್ಚುಗಳ ವಿವರಗಳನ್ನು ಅವಲೋಕಿಸಿ ದೃಢೀಕರಿಸುವುದು. (ಜಮಾ ಖರ್ಚುಗಳ ವಿವರಗಳ ಪಟ್ಟಿಗಳನ್ನು ಲಗತ್ತಿಸಿದೆ).

**ಠರಾವು ಸಂಖ್ಯೆ:216:**

2009ರ ಮೇ ಮತ್ತು ಜೂನ್ ತಿಂಗಳುಗಳ ಜಮಾ ಖರ್ಚುಗಳ ವಿವರಗಳನ್ನು ಅವಲೋಕಿಸಿ ಈ ಕೆಳಕಾಣಿಸಿದ ಲೆಕ್ಕ ಸಾರಾಂಶಗಳಿಗೆ ಸಭೆ ಸರ್ವಾನುಮತದಿಂದ ಒಪ್ಪಿ ದೃಢೀಕರಿಸಿತು.

**ಮೇ–2009**

| | | ಸಾಮಾನ್ಯ ನಿಧಿ | ನೀರು ಸರಬರಾಜು ನಿಧಿ | ಉದ್ದಿಮೆ ನಿಧಿ |
|---|---|---|---|---|
| ಪ್ರಾರಂಭ ಶಿಲ್ಕು | ರೂ. | 17,12,63,947 | 32,73,407 | 73,47,330 |
| ಸ್ವೀಕೃತಿ | ರೂ. | 6,92,44,476 | 26,43,422 | 1,88,540 |
| ಒಟ್ಟು | ರೂ. | 24,05,08,423 | 59,16,829 | 75,35,870 |
| ಪಾವತಿ | ರೂ. | 6,77,80,906 | 21,37,421 | 1,91,276 |
| ಅಂತಿಮ ಶಿಲ್ಕು | ರೂ. | 17,27,27,517 | 37,79,408 | 73,44,594 |

...3

**ಜೂನ್–2009**

| | | ಸಾಮಾನ್ಯ ನಿಧಿ | ನೀರು ಸರಬರಾಜು ನಿಧಿ | ಉದ್ದಿಮೆ ನಿಧಿ |
|---|---|---|---|---|
| ಪ್ರಾರಂಭ ಶಿಲ್ಕು | ರೂ. | 17,22,27,517 | 37,79,408 | 73,44,594 |
| ಸ್ವೀಕೃತಿ | ರೂ. | 11,48,05,503 | 32,46,687 | 2,57,437 |
| ಒಟ್ಟು | ರೂ. | 28,75,33,020 | 70,26,095 | 76,02,031 |
| ಪಾವತಿ | ರೂ. | 3,45,25,021 | 19,31,753 | 60,155 |
| ಅಂತಿಮ ಶಿಲ್ಕು | ರೂ. | 25,30,07,999 | 50,94,342 | 75,41,876 |

**ವಿಷಯ ಸಂಖ್ಯೆ:217:**

ಮಾನ್ಯ ಪ್ರಾದೇಶಿಕ ಆಯುಕ್ತರು, ಗುಲ್ಬರ್ಗಾ ಇವರು ದಿನಾಂಕ:24.11.2008 ರಂದು ಮಹಾನಗರಪಾಲಿಕೆ ಪರಿಶೀಲನೆ ಸಭೆಯಲ್ಲಿ, ಪಾಲಿಕೆಯ ಎಲ್ಲಾ ಕಾರ್ಯ ಕಲಾಪಗಳು ನಿಯಮಿತವಾಗಿ ನೋಡಿಕೊಳ್ಳುವಗೋಸ್ಕರ ಮತ್ತು ಅಭಿವೃದ್ಧಿ ಕೆಲಸಗಳು ಜನ ಸಾಮಾನ್ಯರಿಗೆ ಮುಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರು ಮಹಾನಗರಪಾಲಿಕೆ ಜೊತೆಯಲ್ಲಿ ಸಹಭಾಗಿತ್ವ ವಹಿಸುವುದು ಅವಶ್ಯವಾಗಿದ್ದು ಯಾವುದೇ ಕಾರ್ಯಕ್ರಮಗಳು ಜನರು ಎಲ್ಲಿಯವರೆಗೆ ತಮ್ಮ ಕೆಲಸವೆಂದು ಭಾವಿಸಿ ಕೈ ಜೋಡಿಸುತ್ತಾರೋ ಅಂತಹ ಕೆಲಸಗಳು ಉತ್ತಮ ರೀತಿಯಲ್ಲಿ ನಡೆಯಬಹುದಾಗಿದ್ದು, ಅಲ್ಲದೇ ಸಾರ್ವಜನಿಕರು ಪಾಲಿಕೆಯಲ್ಲಿ ನಡೆಯುವ ಜನಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಮ್ಮ ಹಕ್ಕು ಎಂದು ಪಡೆಯಬಹುದೆಂದು ಇದನ್ನು ಜಾರಿಗೆ ತರಲಿಕ್ಕೆ ಪ್ರತಿಯೊಂದು ವಾರ್ಡುಗಳಲ್ಲಿ ಮೇಲ್ವಿಚಾರಣೆ ನಡೆಸಲು ಕೆಳಕಾಣಿಸಿದ ಸದಸ್ಯರನ್ನೊಳಗೊಂಡ ವಾರ್ಡು ಸಮಿತಿಯನ್ನು ರಚಿಸಲು ನಿರ್ದೇಶಿಸಿರುತ್ತಾರೆ.

1) ಹಿರಿಯ ನಾಗರೀಕರು
2) ಮಹಿಳೆಯರು
3) 25 ವರ್ಷ ಮೀರಿರದ ಯುವಕರು
4) ಸ್ಥಳೀಯ ವ್ಯಾಪಾರಸ್ಥರು
5) ಪದವೀದರರು.

ಸದರಿ ವಾರ್ಡು ಸಮಿತಿಗಳ ರಚನೆಗೆ ಮೇಲ್ಕಂಡ ಸದಸ್ಯರನ್ನು ನೇಮಕಾತಿ ಮಾಡಲು ಪತ್ರಿಕಾ ಪ್ರಕಟಣೆ ಹೊರಡಿಸಿ, ಬಂದಂತಹ ಅರ್ಜಿಗಳನ್ನು ಕ್ರೂಡೀಕರಿಸಿ ದಿನಾಂಕ ನಿಗಧಿಪಡಿಸಿ ಅರ್ಹ ಅಭ್ಯರ್ಥಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಿಕೊಳ್ಳಲು ತಿಳಿಸಿರುತ್ತಾರೆ.

ಕಾರಣ ಮೇಲೆ ವಿವರಿಸಿದಂತೆ ವಾರ್ಡು ಸಮಿತಿ ರಚಿಸುವ ಕುರಿತು ಸೂಕ್ತ ತೀರ್ಮಾನ ಕೈಗೊಳ್ಳಲು ವಿಷಯವನ್ನು ದಿನಾಂಕ:15.06.2009 ರಂದು ಜರುಗಿದ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿ, ಸಭೆಯು ಇದನ್ನು ಸರ್ವಾನುಮತದಿಂದ ಮುಂದೂಡಿದ್ದು, ಮುಂದೂಡಲಾದ ಈ ವಿಷಯವನ್ನು ತೀರ್ಮಾನಕ್ಕಾಗಿ ಪುನಃ ಸಭೆಗೆ ಮಂಡಿಸಿದೆ.

**ಠರಾವು ಸಂಖ್ಯೆ:217:**

ಈ ವಿಷಯವನ್ನು ಸಭೆ ಸರ್ವಾನು ಮತದಿಂದ ಮುಂದೂಡಿತು.

**<u>ವಿಷಯ ಸಂಖ್ಯೆ:218</u>**

ಕಾರ್ಯನಿರ್ವಾಹಕ ಅಭಿಯಂತರರು (ವಿ) ಸಿ.ಎಸ್.ಸಿ.ಜೆಸ್ಕಾಂ, ಬಳ್ಳಾರಿ ಇವರ ಪತ್ರ ಸಂ:ಇಇಇ/ಸಿಎಸ್‌ಸಿ/ಬಿ.ವಿ.ತ.ವೈ/ಎ.ಇ/(ಟಿ)/3346/48, ದಿನಾಂಕ:22.09.2008ರ ಪತ್ರದಲ್ಲಿ ಬಳ್ಳಾರಿ ನಗರದ ರಂಗಮಂದಿರ ಹತ್ತಿರ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವ ಸಲುವಾಗಿ 100 ಕೆ.ವಿ.ಎ. ಟ್ರಾನ್ಸ್‌ಫಾರ್ಮನ್ನು ಸ್ಥಳಾಂತರಿಸಲು ಅಂದಾಜು ವೆಚ್ಚ ರೂ.69,190/– ಗಳಿಗೆ ಅಂದಾಜು ಪತ್ರಿಕೆಯನ್ನು ತಯಾರಿಸಿಕಳುಹಿಸಿ, ಶೇ 10ರಷ್ಟು ಮೇಲ್ವಿಚಾರಣೆ ಶುಲ್ಕ ರೂ.6,919/–ಗಳನ್ನು ಕಾರ್ಯಪಾಲಕ ಅಭಿಯಂತರರು (ವಿ)ಸಿ.ಎಸ್.ಸಿ. ಜೆಸ್ಕಾಂ, ಹಳೆ ಮಹಾನಗರಪಾಲಿಕೆ ಎದುರುಗಡೆ, ಬಳ್ಳಾರಿ ಇವರಿಗೆ ಪಾವತಿಸಲು ಕೋರಿರುತ್ತಾರೆ.

ಕಾರಣ ಸದರಿ ಕಾಮಗಾರಿ ಬಾಬತ್ತು ರೂ.69,190/– ಅಂದಾಜು ವೆಚ್ಚಕ್ಕೆ ಮಂಜೂರಾತಿ ನೀಡಲು ಹಾಗೂ ಮೇಲ್ವಿಚಾರಣೆ ಶುಲ್ಕ ರೂ.6,919/–ಗಳನ್ನು ಜೆಸ್ಕಾಂಗೆ ಪಾವತಿಸಲು ಮತ್ತು ಮಹಾನಗರಪಾಲಿಕೆಯಿಂದ ಟೆಂಡರ್ ಕರೆಯಲು ಸಭೆಯ ಮಂಜೂರಾತಿಗಾಗಿ ಮಂಡಿಸಿದೆ.

**<u>ಠರಾವು ಸಂಖ್ಯೆ:218:</u>**

ಈ ಕಾಮಗಾರಿಯ ಅಂದಾಜು ವೆಚ್ಚ ರೂ.69,190/–ಗಳಿಗೆ ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿ, ಈ ಬಾಬತ್ತಿನ ಮೇಲ್ವಿಚಾರಣೆ ಶುಲ್ಕ ರೂ.6,919/– ಗಳನ್ನು ಜೆಸ್ಕಾಂ ಇಲಾಖೆಯವರಿಗೆ ಪಾವತಿಸಲು ಮತ್ತು ಮಹಾನಗರಪಾಲಿಕೆ ವತಿಯಿಂದ ಟೆಂಡರ್ ಕರೆಯಲು ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

**<u>ವಿಷಯ ಸಂಖ್ಯೆ:219:</u>**

2008–09ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಆಯಾ–ವ್ಯಯದಲ್ಲಿ ಬಳ್ಳಾರಿ ಮಹಾನಗರಪಾಲಿಕೆಗೆ ವಿಶೇಷ ಅನುದಾನ ಅಡಿಯಲ್ಲಿ ರೂ.100.00 ಕೋಟಿಗಳು ಬಿಡುಗಡೆಯಾಗಿದ್ದು, ಸದರಿ ಅನುದಾನದಿಂದ ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳನ್ನು ಅಗಲೀಕರಿಸಿ, ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ಮೂಲಕ ಪಡೆದು ಸದರಿ ಕಾಮಗಾರಿಗಳಿಗೆ ಟೆಂಡರ್ ಮೂಲಕ ಗುತ್ತಿಗೆದಾರರನ್ನು ನಿಗಧಿಪಡಿಸಿದ್ದು ಸದರಿ ವಿಶೇಷ ಅನುದಾನ ಕಾಮಗಾರಿಗಳಿಗೆ ಗುಣಮಟ್ಟವನ್ನು ಕಾಪಾಡಲು ನುರಿತ 3ನೇ ಪಕ್ಷದ ($3^{rd}$ Party) ನಿರ್ವಹಿಸಿದ ದಿನಾಂಕ:16.06.2009 ರಂದು ಟೆಂಡರ್ ಕರೆಯಲಾಗಿದ್ದು, ಈ ಕೆಳಕಾಣಿಸಿದ ಕನ್ಸಲ್‌ಟೆನ್ಸ್‌ರವರು ಟೆಂಡರ್ ಹಾಕಿರುತ್ತಾರೆ.

1. ಮೆ॥ಶಾಂತಲಾ ಪವರ್ ಲಿಮಿಟೆಡ್, ಹುಬ್ಬಳ್ಳಿ.
2. ಮೆ॥ ಇಂಡಿಯನ್ ರಿಜಿಸ್ಟರ್ ಆಫ್ ಷಿಪ್ಪಿಂಗ್ (IRS)ಮುಂಬೈ.
3. ಮೆ॥ ವಾಸ್ತು ಶಿಲ್ಪ ಕನ್ಸಲ್‌ಟೆನ್ಸಿ, ಬೆಂಗಳೂರು.
4. ಮೆ॥ ಸ್ಟುಪ್ ಕನ್ಸಲ್‌ಟೆನ್ಸಿ, ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
5. ಮೆ॥ ನಿಕೇತನ್ ಕನ್ಸಲ್‌ಟೆನ್ಸಿ, ಬೆಂಗಳೂರು.

ದಿನಾಂಕ:31.03.2009 ರಂದು ತಾಂತ್ರಿಕ ಬಿಡ್‌ನಲ್ಲಿ, 2ಜನ $3^{rd}$ Party ಕನ್ಸ್‌ಲ್ಟೆನ್ಸಿ ಇವರು ತಾಂತ್ರಿಕ ಅರ್ಹತೆ ಹೊಂದಿರುವ ಸಂಬಂಧಿಸಿದವರ ಅರ್ಹತೆ ಬಿಡ್ಡನ್ನು ದಿನಾಂಕ:31.03.2009 ರಂದು ತೆರೆಯಲಾಗಿ ಈ ಕೆಳಗಿನಂತೆ ಧರಗಳನ್ನು ಸೂಚಿಸಿರುತ್ತಾರೆ.

| ಕ್ರ. ಸಂ. | ಕನ್ಸೆಲ್ಟೆಂಟ್ ಹೆಸರು | ಸೂಚಿಸಿದ ಧರ (ಅಂದಾಜು ಪತ್ರಿಕೆ ಮೊತ್ತಕ್ಕೆ) |
|---|---|---|
| 1 | ಮೆ॥ಐ.ಆರ್.ಎಸ್.ಇನ್ಸಪೆಕ್ಷನ್ ಸರ್ವಿಸ್, ಬೆಂಗಳೂರು | ಶೇ 0.86% +ಸರ್ವೀಸ್ ಟ್ಯಾಕ್ಸ್ |
| 2. | ಮೆ॥ ಸ್ಟುಪ್ ಕನ್ಸೆಲ್ಟೆಂನ್ಸಿ ಪ್ರೈ.ಲಿ. ಬೆಂಗಳೂರು | ಶೇ 1.25% + ಸರ್ವೀಸ್ ಟ್ಯಾಕ್ಸ್ |

...5

ಸದರಿ ವಿಷಯದ ಕುರಿತು ಕಡಿಮೆ ಟೆಂಡರ್ ಧರ ನೀಡಿದ ಮೆ॥ಐ.ಆರ್.ಎಸ್.ಇನ್ಸ್‌ಪೆಕ್ಷನ್ ಸರ್ವಿಸ್ ಇವರನ್ನು ದಿನಾಂಕ:31.03.2009 ಸಂಜೆ:4.30 ಗಂಟೆಗೆ ಸಂಧಾನಕ್ಕೆ ಕರೆಯಲಾಗಿ ಸದರಿಯವರ ಸಂಗಡ ಅಂತಿಮವಾಗಿ ಚರ್ಚೆ ವಿನಿಮಯ ಮಾಡಲಾಯಿತು. ಕೊನೆಯ ಹಂತದಲ್ಲಿ ಕಾಮಗಾರಿ ವೆಚ್ಚದ ಶೇ 0.50% ಮೊತ್ತಕ್ಕೆ 3ನೇ ಪಾರ್ಟಿ ತಪಾಸಣೆಗೆ (ಸರ್ವಿಸ್ ಟ್ಯಾಕ್ಸ್ ಸಮೇತ ಸೇರಿದ) ಮಾಡಲು ಕನಿಷ್ಟ ಕ್ವಾಲಿಫೈಡ್ ಇಬ್ಬರು ಅಭಿಯಂತರರನ್ನು ಕಾಮಗಾರಿ ಮೇಲ್ವಿಚಾರಣೆ ಹಾಗೂ ತಪಾಸಣೆಗಾಗಿ ನೀಡುವ ಖರಾರಿಗೆ ಒಳಪಟ್ಟು ಧರ ನೀಡಿದ್ದಾರೆ. ಆದ್ದರಿಂದ ಮಹಾನಗರಪಾಲಿಕೆಗಳ ತಿದ್ದುಪಡಿ ಅಧಿನಿಯಮ 2002 ನೇದ್ದರ ನಿಯಮ 6/2(ಎ) III ಕೆಳಗೆ ಟೆಂಡರ್ ಸಂಧಾನ ಧರಗಳಂತೆ ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಮೆ॥ಐ.ಆರ್.ಎಸ್.ಇನ್ಸ್‌ಪೆಕ್ಷನ್ ಸರ್ವಿಸ್ ಬೆಂಗಳೂರು ಇವರಿಗೆ ನೀಡಿದ ಆದೇಶ ಹಾಗೂ ಸಂದಾನದ ಕ್ರಮಕ್ಕೆ ಘಟನೋತ್ತರ ಮಂಜೂರಾತಿ ನೀಡಲು ಸಭೆಗೆ ಮಂಡಿಸಿದೆ.

**<u>ಠರಾವು ಸಂಖ್ಯೆ:219:</u>**

2008-09ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ರೂ.100 ಕೋಟಿ ವಿಶೇಷ ಅನುದಾನದಿಂದ ಕೈಗೊಳ್ಳಲಿರುವ ಕಾಮಗಾರಿಗಳನ್ನು ಕಛೇರಿ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ 3ನೇ ಪಕ್ಷದಿಂದ ಮೇಲ್ವಿಚಾರಣೆ ಹಾಗೂ ತಪಾಸಣೆ ಕಾರ್ಯಕೈಗೊಳ್ಳಲು ಕಡಿಮೆ ಟೆಂಡರ್ ಧರ ಕಾಣಿಸಿದ ಮೆ॥ಐ.ಆರ್.ಎಸ್.ಇನ್ಸ್‌ಪೆಕ್ಷನ್ ಸರ್ವಿಸ್ ಬೆಂಗಳೂರು ಇವರೊಂದಿಗೆ ಮಾನ್ಯ ಜಿಲ್ಲಾಧಿಕಾರಿಗಳು ಸಂಧಾನದ ಮೂಲಕ ಇತ್ಯರ್ಥಪಡಿಸಿದ ಧರದ ಪ್ರಕಾರ ಟೆಂಡರ್ ಅಂಗೀಕರಿಸಿ ಕಾರ್ಯಾದೇಶ ನೀಡಿದ ಮಾನ್ಯ ಜಿಲ್ಲಾಧಿಕಾರಿಗಳ ಕ್ರಮಕ್ಕೆ ಸಭೆ ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು.

**<u>ವಿಷಯ ಸಂಖ್ಯೆ:220:</u>**

ಬೆಳಗಾವಿ ಮಹಾನಗರಪಾಲಿಕೆಯ ಮಹಾಪೌರರು ತಮ್ಮ ಪತ್ರ ದಿನಾಂಕ:22.07.2009 ರಲ್ಲಿ ಮಹಾನಗರಪಾಲಿಕೆಗಳ ಮಹಾಪೌರರಿಗೆ ಉಪಮಹಾಪೌರರಿಗೆ ಮತ್ತು ಸದಸ್ಯರಿಗೆ ಪ್ರಸ್ತು ನೀಡುತ್ತಿರುವ ಗೌರವ ಧನ ಇಂದಿನ ಕಾಲ ಮಾನಕ್ಕೆ ತಕ್ಕಂತೆ ಬಹಳ ಕಡಿಮೆಯಾಗಿದ್ದು ಅದನ್ನು ಹೆಚ್ಚಳಗೊಳಿಸುವ ಅವಶ್ಯಕತೆ ಇದ್ದು ಆ ಪ್ರಕಾರ ಮಹಾಪೌರರಿಗೆ ರೂ.25,000/- ಉಪಮಹಾಪೌರರಿಗೆ ರೂ.20,000/- ಮತ್ತು ಸದಸ್ಯರಿಗೆ ರೂ.15,000/- ಪ್ರಕಾರ ಪಾವತಿಸುವಂತೆ ತಮ್ಮಿಂದ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಇದೇ ತೆರನಾದ ಪ್ರಸ್ತಾವನೆಯನ್ನು ಬಳ್ಳಾರಿ ಮಹಾನಗರಪಾಲಿಕೆಯಿಂದಲೂ ಸರ್ಕಾರಕ್ಕೆ ಸಲ್ಲಿಸುವಂತೆ ಈ ಮಹಾನಗರಪಾಲಿಕೆಯ ಮಹಾಪೌರರಲ್ಲಿ ಕೋರಿರುತ್ತಾರೆ.

ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಹೆಚ್.ಯು.ಡಿ./42/ ಎಸಿಜಿ/90, ದಿನಾಂಕ:06.01.1993 ರ ಪ್ರಕಾರ ಪ್ರಸ್ತುತ ಮಹಾಪೌರರಿಗೆ ತಿಂಗಳಿಗೆ ಗೌರವ ಧನ ರೂ.2000/-, ಉಪಮಹಾಪೌರರಿಗೆ ಗೌರವ ಧನ ರೂ.12,00/- + ವಾಹನ ಒದಗಿಸದಿದ್ದಲ್ಲಿ ರೂ.800/- ವಾಹನ ಸೌಕರ್ಯ ಭತ್ಯೆ ಮತ್ತು ಸದಸ್ಯರಿಗೆ ಗೌರವ ಧನ ರೂ.400+ ವಾಹನ ಸೌಕರ್ಯ ಭತ್ಯ 250/-+ ರೂ.60/- ಮೀಟಿಂಗ್ ಭತ್ಯೆ ಪಾವತಿಸಲಾಗುತ್ತಿದೆ.

ಕಾರಣ ಮಹಾಪೌರರಿಗೆ ತಿಂಗಳಿಗೆ ಗೌರವ ಧನ ರೂ.25000/- ಉಪಮಹಾಪೌರರಿಗೆ ರೂ.20,000/- ಮತ್ತು ಸದಸ್ಯರಿಗೆ ರೂ.15,000/- ಪ್ರಕಾರ ಹೆಚ್ಚಳಗೊಳಿಸಿ ಪಾವತಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು ತೀರ್ಮಾನ ಕೈಗೊಳ್ಳಲು ಸಭೆಗೆ ಮಂಡಿಸಿದೆ.

**<u>ಠರಾವು ಸಂಖ್ಯೆ:220:</u>**

ಕಛೇರಿ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ಸರ್ಕಾರದ ಆದೇಶ ಸಂಖ್ಯೆ:ಹೆಚ್.ಯು.ಡಿ./42/ ಎಸಿಜಿ/90, ದಿನಾಂಕ:06.01.1993ರ ಪ್ರಕಾರ ಪ್ರಸ್ತುತ ಮಹಾನಗರಪಾಲಿಕೆಗಳ ಮಹಾಪೌರರಿಗೆ, ಉಪಮಹಾಪೌರರಿಗೆ ಮತ್ತು ಸದಸ್ಯರಿಗೆ ಪಾವತಿಸುತ್ತಿರುವ ಗೌರವಧನ ಇಂದಿನ ಕಾಲಮಾನಕ್ಕೆ ತಕ್ಕಂತೆ ಅತಿ ಕಡಿಮೆಯಾಗಿದ್ದು, ಅದನ್ನು ಹೆಚ್ಚಳಗೊಳಿಸಿ ತಿಂಗಳಿಗೆ ಮಹಾಪೌರರಿಗೆ ರೂ.25,000/- ಉಪಮಹಾಪೌರರಿಗೆ ರೂ.20000/- ಮತ್ತು ಸದಸ್ಯರಿಗೆ ರೂ.15000/- ಪ್ರಕಾರ ಪಾವತಿಸಲು ಮಂಜೂರಾತಿ ಆದೇಶ ನೀಡುವಂತೆ ಸರ್ಕಾರಕ್ಕೆ ಸಭೆ ಸರ್ವಾನು ಮತದಿಂದ ಕೋರಿತು.

**ವಿಷಯ ಸಂಖ್ಯೆ:221:**

ಬಳ್ಳಾರಿನಗರದ ಕೌಲ್ ಬಜಾರ ಮುಖ್ಯ ರಸ್ತೆ 1ನೇ ರೈಲ್ವೆ ಗೇಟನಿಂದ ಟಿ.ಬಿ.ಆಸ್ಪತ್ರೆ ವರೆಗೆ ರಸ್ತೆ ಅಗಲೀಕರಿಸಿ ಅಭಿವೃದ್ದಿ ಪಡಿಸಲು ಮೆ॥ ಸೌಭಾಗ್ಯ ಪ್ರಾಜೆಕ್ಟ್ಸ್ ಪ್ರೈ ಲಿ., ಆಂದ್ರ ಪ್ರದೇಶ ಇವರಿಗೆ ಒಟ್ಟು ಮೊತ್ತ ರೂ. 10,51,44,953.00 ವೆಚ್ಚದ ಕಾಮಾರಿ ಆದೇಶ ನೀಡಲಾಗಿದೆ, ಅದರಂತೆ ಸದರಿಯವರು ಈಗಾಗಲೇ ಕಾಮಗಾರಿ ಪ್ರಾರಂಭಿಸಿ, ಅಭಿವೃದ್ದಿ ಕಾರ್ಯ ಪ್ರಗತಿಯಲ್ಲಿದೆ, ಆದರೆ ರಸ್ತೆಯು ಚತುರ್ಮುಖ ರಸ್ತೆಯನ್ನಾಗಿ ಮಾಡಲು ಕನಿಷ್ಠ 65 ಅಡಿ ಜಾಗದ ಅವಶ್ಯಕತೆ ಇದೆ, ಸದರಿ ವಿಷಯದನ್ವಯ ಕೌಲ್‌ಬಜಾರ ಮುಖ್ಯ ರಸ್ತೆಯ ಅಕ್ಕಪಕ್ಕದಲ್ಲಿಯ ಜಾಗದ ಮಾಲಿಕರನ್ನು ಮಹಾನಗರ ಪಾಲಿಕೆಗೆ ಕರೆಸಿ ಮಾನ್ಯ ಜಿಲ್ಲಾಧಿಕಾರಿಗಳ ಮುಖಾಂತರ ಸಭೆಯನ್ನು ನಡೆಸಲಾಯಿತು, ಸದರಿ ಅವಧಿಯಲ್ಲಿ ಕನಿಷ್ಠ 65 ಅಡಿ ಅಗಲಕ್ಕೆ ಈಗಿದ್ದ ರಸ್ತೆಯಿಂದ ಜಾಗಕ್ಕೆ ಅನುಗುಣವಾಗಿ 6 ರಿಂದ 7 ಅಡಿ ಜಾಗವನ್ನು ಪಕ್ಕದಲ್ಲಿದ್ದ ಜಾಗದ ಮಾಲಿಕರು ರಸ್ತೆಗೆ ಬಿಟ್ಟು ಕೊಡಲು ತಮ್ಮ ಸಮ್ಮತಿ ನೀಡಿರುತ್ತಾರೆ ಹಾಗೂ ಅದರಂತೆ ಮನೆಯ/ಅಂಗಡಿಯ ಮಾಲಿಕರು ಸ್ವಯಿಚ್ಚೆಯಿಂದ 6 ರಿಂದ 7 ಅಡಿ ಜಾಗವನ್ನು ತೆಗೆದು ರಸ್ತೆ ಅಗಲೀಕರಣಕ್ಕೆ ಸಹಕರಿಸಿದ್ದಾರೆ, ಆದರೆ ಕೌಲ್‌ಬಜಾರ ಮುಖ್ಯ ರಸ್ತೆಯಲ್ಲಿ ಶ್ರೀ ಕೆ. ಜಹೀರ್ ಅಹ್ಮದ್ ಇವರು ಮಾತ್ರ ರಸ್ತೆಗೆ ಸ್ವಯಿಚ್ಚೆಯಿಂದ ಜಾಗ ಬಿಟ್ಟು ಕೊಡಲಾರದೆ ಕರ್ನಾಟಕ ಉಚ್ಚನ್ಯಾಯಾಲಯ, ಸಂಚಾರಿ ಪೀಠ, ಧಾರವಾಡದಲ್ಲಿ ಡಬ್ಲ್ಯೂ.ಪಿ. ನಂ 62852/2009 (ಎಲ್.ಬಿ–ಆರ್‌ಇಎಸ್) ನೇದ್ದರ ಮೂಲಕ ನ್ಯಾಯಾಲಯದ ಮೊರೆ ಹೋಗಿದ್ದು ಮತ್ತು ಸದರಿ ವಿಷಯದ ಸಂಬಂದ ದಿ: 08.06.09 ರಂದು ಉಚ್ಚನ್ಯಾಯಾಲಯದಿಂದ ಮಧ್ಯಂತರ ಆದೇಶ ತಂದಿದ್ದಾರೆ, ಸದರಿ ಆದೇಶದಲ್ಲಿ ಸಿ.ಟಿ.ಎಸ್.ನಂ 989 ಸಿ.ಟಿ.ಎಸ್ ವಾರ್ಡ ನಂ.17 ಬ್ಲಾಕ ನಂ.7 ನೇದ್ದರಲ್ಲಿ ಒಟ್ಟು 14952/34.3 ಚ.ಅ. ಕ್ಷೇತ್ರವಿದ್ದು, ಸದರಿ ಟಿ.ಎಸ್.ನಂಬರಿಗೆ ಒಟ್ಟು 19 ಜನರ ಹೆಸರು ದಾಖಲಿದ್ದು ಇದರಲ್ಲಿ ಶ್ರೀ ಕೆ. ಜಹೀರ್ ಅಹ್ಮದ್ ಇವರು ಸಹ ಆಸ್ತಿಯ ಭಾಗದಲ್ಲಿ ಮಾಲಿಕರಾಗಿದ್ದಾರೆ, ಸದರಿಯವರು ಹಾಲಿ ವಾಸಕ್ಕಾಗಿದ್ದ ಕಟ್ಟಡದಲ್ಲಿ (ರಸ್ತೆಗೆ ಹೊಂದಿ) ವಾಸವಾಗಿರುವುದು ಸ್ಥಳ ತನಿಖೆಯಿಂದ ಕಂಡುಬಂದಿದೆ, ನ್ಯಾಯಾಲಯದ ಮಧ್ಯಂತರ ಆದೇಶದಲ್ಲಿ ಸಿ.ಟಿ.ಎಸ್.ನಂ 989 ಸಿ.ಟಿ.ಎಸ್ ವಾರ್ಡ ನಂ.17 ಬ್ಲಾಕ ನಂ.7 ನೇದ್ದರ ಜಾಗ ಶ್ರೀ ಕೆ. ಜಹೀರ್ ಅಹ್ಮದ್ ಇವರ ಸ್ವಂತ ಆಸ್ತಿಯಾಗಿರುವುದರಿಂದ ಮತ್ತು ಸದರಿ ಆಸ್ತಿಯ ಜಾಗ ಸಾರ್ವಜನಿಕ ರಸ್ತೆ ಅಗಲೀಕರಣಕ್ಕಾಗಿ ಮಹಾನಗರ ಪಾಲಿಕೆಗೆ ಬೇಕಾಗಿದ್ದಲ್ಲಿ ನಿಯಮಗಳನ್ವಯ ವಾದಿಯ ಸಂಗಡ ಸಂಧಾನ ಮಾಡಿ ಆಸ್ತಿಯ ಕಿಮ್ಮತ್ತನ್ನು ನಿಗದಿ ಪಡಿಸಿ ಅಥವಾ ವಾದಿಯು ಒಪ್ಪದೆ ಹೊದಲ್ಲಿ ಸಾರ್ವಜನಿಕ ರಸ್ತೆ ಅಗಲೀಕರಣ ಸಂಬಂದ ಭೂಸ್ವಾದೀನ ಮಾಡಿಕೊಳ್ಳ ಬಹುದು ಎಂದು ಮಧ್ಯಂತರ ಆದೇಶ ಇರುತ್ತದೆ. ಆದರೆ ರಸ್ತೆ ಸಿ.ಟಿ.ಎಸ್.ನಂ 989 ಸಿ.ಟಿ.ಎಸ್ ವಾರ್ಡ ನಂ.17 ಬ್ಲಾಕ ನಂ.7 ಕ್ಕೆ ಈ ಕೆಳಕಾಣಿಸಿದ ಚಕ್ಕಬಂದಿ ಆಸ್ತಿಯ ಭಾಗ ರಸ್ತೆ ಅಗಲೀಕರಣಕ್ಕೆ ಅವಶ್ಯವಿದೆ.

| | |
|---|---|
| ಪೂರ್ವ | = ಸಾರ್ವಜನಿಕ ಸಣ್ಣದಾದ ರಸ್ತೆ |
| ಪಶ್ಚಿಮ | = ಸಿ.ಟಿ.ಎಸ್. ನಂ 996 ರ ಬಾಗ |
| ಉತ್ತರ | = ಸಿ.ಟಿ.ಎಸ್. ನಂ 989 ರ ಉಳಿದ ಬಾಗ |
| ದಕ್ಷಿಣ | = ಕೌಲ್ ಬಜಾರ ಮುಖ್ಯ ರಸ್ತೆ |

**ಭೂಸ್ವಾದೀನ ಪಡಿಸಿಕೊಳ್ಳಲು ಜಾಗದ ವಿವರ**

| | |
|---|---|
| **1. ಪ್ಲಾಟಿನ ಅಳತೆ** | = ಪೂರ್ವ–ಪಶ್ಚಿಮ (ದಕ್ಷಿಣ ಕಡೆಗೆ 66.5 ಅಡಿ) |
| | = ಪೂರ್ವ–ಪಶ್ಚಿಮ (ಉತ್ತರ ಕಡೆಗೆ 66.5 ಅಡಿ) |
| | = ಉತ್ತರ–ದಕ್ಷಿಣ (ಪೂರ್ವ ಕಡೆಗೆ 11 ಅಡಿ) |
| | = ಉತ್ತರ–ದಕ್ಷಿಣ (ಪಶ್ಚಿಮ ಕಡೆಗೆ 11 ಅಡಿ) |

ಒಟ್ಟು ಭೂಸ್ವಾದೀನ ಮಾಡುವ ಕ್ಷೇತ್ರ 731.5 ಚ.ಅಡಿ.

2. **ನೆಲ ಹಂತಸ್ತು ಕಟ್ಟಡ** (ಪ್ಲಾಟಿನಲ್ಲಿ)

ದಕ್ಷಿಣ ರಸ್ತೆಗೆ ಹೊಂದಿ 66.5*3.5 ಅಡಿ = 232.75 ಚ.ಅಡಿ

3. **<u>1ನೇ ಹಂತಸ್ತು</u>** (ಪ್ಲಾಟಿನಲ್ಲಿ)
ದಕ್ಷಿಣ ರಸ್ತೆ ಕಡೆಗೆ 66.5*8 = 532 ಚ.ಅಡಿ

ಒಟ್ಟು ಕಟ್ಟಡ ಭೂಸ್ವಾದೀನದ ಕ್ಷೇತ್ರ 764.75 ಚ.ಅಡಿ.

ಕಾರಣ ಮೇಲ್ಕಾಣಿಸಿದ ಸಿ.ಟಿ.ಎಸ್.ನಂ 989 ಸಿ.ಟಿ.ಎಸ್ ವಾರ್ಡ ನಂ.17 ಬ್ಲಾಕ ನಂ.7 ನೇದ್ದರ ರಸ್ತೆಗೆ ಹೊಂದಿದ್ದ ಒಟ್ಟು 731.5 ಚ.ಅಡಿ ಖುಲ್ಲಾ ಜಾಗವು ಮತ್ತು ಸದರಿ ಜಾಗದಲ್ಲಿ ಈಗಾಗಲೇ ಸುಮಾರು 50 ವರ್ಷಗಳ ಹಿಂದೆ ಕಟ್ಟಿದ ಆರ್.ಸಿ.ಸಿ ಕಟ್ಟಡದ ನೆಲ ಹಂತಸ್ತು ಹಾಗೂ 1ನೇ ಹಂತಸ್ತಿನ ಒಟ್ಟು ಫ್ಲಿಂತ್ ವಿಸ್ತೀರಣ 764.75 ಚ.ಅಡಿ ಕ್ಷೇತ್ರವು ಸಾರ್ವಜನಿಕ ರಸ್ತೆಗೆ ಅವಶ್ಯಕತೆ ಇದ್ದು ಸದರಿ ಕ್ಷೇತ್ರವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಮಾಲೀಕರಿಗೆ ಪಾವತಿಸಲು ಮಾನ್ಯ ಉಪವಿಭಾಗಾದಿಕಾರಿಗಳು ಬಳ್ಳಾರಿ, ಇವರಿಗೆ ಮುಂಗಡವಾಗಿ ಪಾವತಿಸುವುದು ಅವಶ್ಯವಿದೆ. ಕಾರಣ ಭೂಸ್ವಾಧೀನ ಪಡಿಸುವ ಕ್ರಮವನ್ನು ಘಟನೋತ್ತರ ಮಂಜೂರಾತಿಗಾಗಿ ವಿಷಯವನ್ನು ಮಹಾನಗರಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಮಂಡಿಸಿದೆ.

**<u>ಠರಾವು ಸಂಖ್ಯೆ:221:</u>**

ಕಛೇರಿ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳ ಶಿಫಾರಸ್ಸಿನ ಮೇರೆಗೆ ಬಳ್ಳಾರಿ ನಗರದ ಸಿ.ಟಿ.ಎಸ್.ನಂ.989, ಸಿ.ಟಿ.ಎಸ್.ವಾರ್ಡ್ ನಂ.17, ಬ್ಲಾಕ್ ನಂ.7ನೇದ್ದರ ರಸ್ತೆಗೆ ಹೊಂದಿದ್ದ ಒಟ್ಟು 731.5 ಚ.ಅಡಿ ಖಾಲಿ ಜಾಗ ಮತ್ತು ಸದರಿ ಜಾಗದಲ್ಲಿ ಸುಮಾರು 50 ವರ್ಷಗಳ ಹಿಂದೆ ಕಟ್ಟಿದ ಕಟ್ಟಡದ ನೆಲ ಅಂತಸ್ತು ಹಾಗೂ 1ನೇ ಅಂತಸ್ತಿನ ಒಟ್ಟು ಫ್ಲಿಂತ್ ವಿಸ್ತೀರ್ಣ:764.75 ಚ.ಅಡಿ. ಕ್ಷೇತ್ರವು ಸಾರ್ವಜನಿಕ ರಸ್ತೆ ಅಗಲೀಕರಣಕ್ಕೆ ಅವಶ್ಯಕತೆ ಇದ್ದು ಸದರಿ ಜಾಗ ಸಮೇತ ಕಟ್ಟಡದ ಕ್ಷೇತ್ರವನ್ನು ಬಳ್ಳಾರಿ ಉಪವಿಭಾಗಾಧಿಕಾರಿಗಳು ಭೂಸ್ವಾಧೀನ ಪಡಿಸಿಕೊಳ್ಳಲು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಮಾಲೀಕರಿಗೆ ಪಾವತಿಸಲು ಸದರಿ ವೆಚ್ಚದ ಒಟ್ಟು ಹಣವನ್ನು ಮಹಾನಗರಪಾಲಿಕೆಯಿಂದ ಉಪವಿಭಾಗಾಧಿಕಾರಿಗಳು ಬಳ್ಳಾರಿ ಇವರಿಗೆ ಮುಂಗಡವಾಗಿ ಪಾವತಿಸಲು ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿತು.

**<u>ವಿಷಯ ಸಂಖ್ಯೆ:222:</u>**

ಮಹಾನಗರಪಾಲಿಕೆ, ಬಳ್ಳಾರಿಯ 2009-10 ನೇ ಸಾಲಿನ ಶೇ 18ರ ಯೋಜನೆ ಅಡಿಯಲ್ಲಿ ಪ.ಜಾ/ಪ.ಪಂಗಡದ ಜನರು ವಾಸಿಸುವ ಈ ಕೆಳಗಿನ ಬಡಾವಣೆಗಳಲ್ಲಿ ಅಭಿವೃದ್ಧಿ 05 ಕಾಮಗಾರಿಗಳನ್ನು ಟೆಂಡರ್ ಕರೆಯಬೇಕಾಗಿದ್ದು, ಸದರಿ ಕಾಮಗಾರಿಗಳನ್ನು ಸಾಮಾನ್ಯ ಸಭೆ ಮಂಜೂರಾತಿಗಾಗಿ ಸಭೆಗೆ ಮಂಡಿಸಿದೆ.

| ಕ್ರ. ಸಂ. | ಕಾಮಗಾರಿ ವಿವರ | ಅಂದಾಜು ವೆಚ್ಚ (ರೂ.ಗಳಲ್ಲಿ) |
|---|---|---|
| 1 | 2 | 3 |
| 1. | ನಗರದ ಬಳ್ಳಾರಿ ಡಿಯೋಸಿಸ್ ಡೆವಲಪ್‌ಮೆಂಟ್ ಸೊಸೈಟಿ ಕಂಟೋನ್ಮೆಂಟ್, ಬಳ್ಳಾರಿಯಲ್ಲಿ ಪ.ಜಾ/ಪ.ಪಂಗಡದ ಅನಾಥ ಮಕ್ಕಳಿಗೆ ಶೌಚಾಲಯ ಮತ್ತು ಸ್ನಾನದ ಗೃಹ ನಿರ್ಮಿಸುವುದು | 1475000 |
| 2. | ನಗರದ 16ನೇ ವಾರ್ಡ್ ವಿಶ್ವನಾಥಪುರಂ ಮುಖ್ಯರಸ್ತೆಯಲ್ಲಿ ಕಲ್ಲು ಕಟ್ಟಡ ಚರಂಡಿ ನಿರ್ಮಿಸುವುದು | 1000000 |
| 3. | ನಗರದ 16ನೇ ವಾರ್ಡ್ ವಿಶ್ವನಾಥಪುರಂ ಮತ್ತು ಹನುಮಾನ್ ನಗರದಲ್ಲಿ 160 ಎಂ.ಎಂ, 110 ಎಂ.ಎಂ ಮತ್ತು 90 ಎಂ.ಎಂ ವ್ಯಾಸದ ಪಿವಿಸಿ ಪೈಪ್‌ಲೈನ್ ಹಾಕುವುದು | 500000 |

| | | |
|---|---|---|
| 4. | ನಗರದ 14ನೇ ವಾರ್ಡ್ ರಾಜ್ಯೋತ್ಸವ ನಗರ 1ನೇ ಕ್ರಾಸ್‌ನಲ್ಲಿ 90 ಎಂ.ಎಂ ಪಿವಿಸಿ ಪೈಪ್‌ಲೈನ್ ಹಾಕುವುದು | 56000 |
| 5. | ನಗರದ ರೇಣುಕಾ ನಗರ, ಬೀಚಿ ನಗರ, ನಲ್ಲಚೆರವು ಪ್ರದೇಶ, ಎಂ.ಕೆ.ನಗರ, ಕೋಟೆ ಪ್ರದೇಶಗಳಲ್ಲಿ ರಸ್ತೆಗ ಅಡ್ಡವಾಗಿರುವ ಕಂಬಗಳನ್ನು ತೆಗೆದು ಹೊಸದಾಗಿ ವಿದ್ಯುತ್ ಕಂಬಗಳನ್ನು ಹಾಕಿ ವಯರ್ ಎಳೆಯುವುದು | 529000 |

**<u>ಠರಾವು ಸಂಖ್ಯೆ:222:</u>**

2009–10ನೇ ಸಾಲಿನ ಶೇ 18ರ ಯೋಜನೆ ಅಡಿಯಲ್ಲಿ ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಕಾಮಗಾರಿ ಕ್ರಮ ಸಂಖ್ಯೆ:1ರಿಂದ 5ರವರೆಗಿನ ಆಯಾ ಕಾಮಗಾರಿಗಳ ಮುಂದೆ ಕಾಣಿಸಿರುವ ಆಯಾ ಅಂದಾಜು ವೆಚ್ಚಗಳಿಗೆ ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿ, ಈ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ನಿಯಮಾನುಸಾರ ಟೆಂಡರುಗಳನ್ನು ಕರೆಯಲು ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಲಾಯಿತು.

**<u>ವಿಷಯ ಸಂಖ್ಯೆ:223:</u>**

ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ಮಹಾನಗರಪಾಲಿಕೆಯ ವಿವಿಧ ತರ್ಕಾರಿ ಮಾರುಕಟ್ಟೆ, ಮಾಂಸದ ಮಾರುಕಟ್ಟೆ, ಕುರಿಗಳ ವದಾಗೃಹ, ಧನಗಳ ವಾದಗೃಹ ಮತ್ತು ಖಾಸಗಿ ಬಸ್ ನಿಲ್ದಾಣಗಳ ಶುಲ್ಕ ವಸೂಲಾತಿಗಾಗಿ 2009–10 ನೇ ಸಾಲಿಗೆ ಬಹಿರಂಗ ಹರಾಜನ್ನು ದಿನಾಂಕ : 10.07.2009 ರಂದು ಬಹಿರಂಗ ಹರಾಜು ಮೂಲಕ ಫೀ ಮತ್ತು ಶುಲ್ಕ ವಸೂಲಾತಿಗಾಗಿ ಹರಾಜು ಹಾಕಲಾಗಿದು, ಸದರಿ ಹರಾಜಿನಲ್ಲಿ ಮುಂಗಡ ಠೇವಣಿ ಪಾವತಿಸಿ ಅತೀ ಹೆಚ್ಚಿನ ಬಿಡ್ ಕೂಗಿದವರ ವಿವರಗಳು ಈ ಕೆಳಗಿನಂತಿದೆ.

| ಕ್ರ. ಸಂ | ಪ್ರದೇಶ | ಮುಂಗಡ ಠೇವಣಿ ಮೊತ್ತ ರೂ | ಲೀಜ್ ಪಡೆದವರ ಹೆಸರು | ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಸವಾಲ್ ಕೂಗಿದ ಮೊತ್ತ ರೂ. |
|---|---|---|---|---|
| 1 | 1,2,9,11,13,16,18ನೇ ವಾರ್ಡಿನಲ್ಲಿ ಬರುವ ತರಕಾರಿ ಮಾರುಕಟ್ಟೆ ಪ್ರದೇಶಗಳು ಹಾಗೂ ಬಂಡಿ ನಿಲ್ದಾಣದ ಶುಲ್ಕ | **5,00,000.00** | ಯಾರು ಭಾಗವಹಿಸಿರುವುದಿಲ್ಲ | –– |
| 2 | 13ನೇ ವಾರ್ಡಿನ ಮಾಂಸದ ಮಾರುಕಟ್ಟೆಯ 48 ಮಳಿಗೆಗಳು | **50,000.00** | ಕೆ.ಮುಕುಂದ ರಾವ್ | 70,000/– |
| 3 | 24ನೇ ವಾರ್ಡಿನಲ್ಲಿರುವ ಕೌಲ ಬಜಾರ ಕುರಿ ವಧಾಗೃಹ | **50,000.00** | ಎಂ.ಬಾಷಸಾಬ್ | 1,05,000/– |
| 4 | 24 ನೇ ವಾರ್ಡಿನಲ್ಲಿರುವ ಕೌಲಬಜಾರ ನಲ್ಲಿರುವ ದನಗಳ ವಧಾಗೃಹ | **30,000.00** | ಸಿ.ಎ.ಹಮೀದ್ ಬಾಷ | 38,000/– |
| 5 | ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಖಾಸಗಿ ಬಸ್ಸು ನಿಲ್ದಾಣಗಳು ಶುಲ್ಕ ವಸೂಲಿ | 1,00,000.00 | ವೈ.ರಾಮಲಿಂಗ | 2,75,000/– |

ಈ ಮೇಲೆ ವಿವರಿಸಿದಂತೆ ತರ್ಕಾರಿ ಮಾರುಕಟ್ಟೆ ಮತ್ತು ಬಂಡಿ ನಿಲ್ದಾಣ ಶುಲ್ಕ ವಸೂಲಿಗಾಗಿ ಬಹಿರಂಗ ಹರಾಜು ಹಾಕಲಾಗಿ ಸದರಿ ಸಗಟು ಮಾರುಕಟ್ಟೆಯು ಎ.ಪಿ.ಎಂ.ಸಿಗೆ ಸ್ಥಳಾಂತರವಾಗಿರುವುದರಿಂದ ಶುಲ್ಕವನ್ನು ಎ.ಪಿ.ಎಂ.ಸಿ.ಯವರು ವಸೂಲಿ ಮಾಡುತ್ತಿರುವುದರಿಂದ ಸದರಿ ತರಕಾರಿ ಮಾರುಕಟ್ಟೆಗೆ ಮುಂಗಡ ಠೇವಣಿ ಪಾವತಿ ಮಾಡಿ ಯಾರು ಹರಾಜಿಗೆ ಭಾಗವಹಿಸಿರುವುದಿಲ್ಲ. ಕಾರಣ ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

…9

ಮತ್ತು ಇತರೆ ಕ್ರ.ಸಂ.2 ರಿಂದ 5 ರ ವರೆಗಿನ ಮಾಂಸದ ಮಾರುಕಟ್ಟೆ, ಕಸಾಯಿ ಖಾನೆ ಮತ್ತು ಖಾಸಗಿ ಬಸ್ ನಿಲ್ದಾಣದ ಶುಲ್ಕ ವಸೂಲಾತಿಗಾಗಿ ಅತೀ ಹೆಚ್ಚಿನ ಬಿಡ್ ಕೂಗಿದವರ ಬಿಡ್‌ದಾರರ ಹೆಚ್ಚಿನ ಮೊತ್ತವನ್ನು ಅನುಮೋದಿಸಲು ಸಾಮಾನ್ಯ ಸಭೆ ಮುಂದೆ ಮಂಡಿಸಿದೆ.

**<u>ಠರಾವು ಸಂಖ್ಯೆ:223:</u>**

ಕಛೇರಿ ಟಿಪ್ಪಣಿಯಲ್ಲಿ ಕಾಣಿಸಿರುವ ತಃಖ್ತೆಯಲ್ಲಿ ಕ್ರಮ ಸಂಖ್ಯೆ:1ರಲ್ಲಿ ಕಾಣಿಸಿರುವ ಆಸ್ತಿಗಳ ಲೀಜ್‌ಗಾಗಿ ಪುನಃ ಬಹಿರಂಗ ಹರಾಜು ಏರ್ಪಡಿಸಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು. ಮತ್ತು ಸದ್ರಿ ತಃಖ್ತೆಯಲ್ಲಿಯ ಕ್ರಮ ಸಂಖ್ಯೆ 2 ರಿಂದ 5ರವರೆಗಿನ ಆಸ್ತಿಗಳ 2009–10ನೇ ಸಾಲಿಗೆ ಶುಲ್ಕ ವಸೂಲಾತಿಗಾಗಿ ಹೆಚ್ಚಿನ ಸವಾಲಿನ ಮೊತ್ತಗಳನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

**<u>ವಿಷಯ ಸಂಖ್ಯೆ:224:</u>**

2009–10 ನೇ ಸಾಲಿನಲ್ಲಿ ಬಳ್ಳಾರಿ ಮಹಾನಗರಪಾಲಿಕೆ ವತಿಯಿಂದ ಈ ಕೆಳಗಿನ ಬಡಾವಣೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ನೀರು ಸರಬರಾಜು ನಿರ್ವಹಣೆಗಾಗಿ ಪೈಪ್‌ಲೈನ್ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ' ಈ ಕೆಳಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಧರದ ಪಟ್ಟಿಯಂತೆ ತಯಾರಿಸಲಾಗಿ, ಪ್ರಯುಕ್ತ ಸದರಿ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲು ಸಭೆಗೆ ಮಂಡಿಸಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ವೆಚ್ಚ |
|---|---|---|
| 1 | ಬಳ್ಳಾರಿ ನಗರದ 35ನೇ ವಾರ್ಡ್‌ನ ಸಿರುಗುಪ್ಪ ರಸ್ತೆಯಲ್ಲಿರುವ ಭುವನಗಿರಿ ಲಿಂಕ್ ರಸ್ತೆಗೆ 160 ಎಂ.ಎಂ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 262000 |
| 2 | ಬಳ್ಳಾರಿ ನಗರದ 18ನೇ ವಾರ್ಡಿನ ಬಡಾವಣೆಯ ವಿವಿಧ ಪ್ರದೇಶಗಳಲ್ಲಿ ನೀರು ಸರಬರಾಜು ನಿರ್ವಹಣೆಗಾಗಿ 90 ಎಂ.ಎಂ. ವ್ಯಾಸದ ಪಿವಿಸಿ ಪೈಪ್‌ಲೈನ್ ಹಾಕುವ ಕಾಮಗಾರಿ | 146000 |
| 3 | ಬಳ್ಳಾರಿ ನಗರದ 12ನೇ ವಾರ್ಡಿನ ಮುಲ್ಲಂಗಿ ಪಂಪಮ್ಮ ಬೀದಿಯಲ್ಲಿ 90 ಎಂ.ಎಂ. ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 10000 |
| 4 | ಬಳ್ಳಾರಿ ನಗರದ 12ನೇ ವಾರ್ಡಿನ ಪಾಯಲ್ ಬೀದಿಯಲ್ಲಿ 90 ಎಂ.ಎಂ ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 7100 |
| 5 | ಬಳ್ಳಾರಿ ನಗರದ 12ನೇ ವಾರ್ಡಿನ ಖಾಜಾಸಾಬ್ ಗಲ್ಲಿಯಲ್ಲಿ 90 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 10000 |

**<u>ಠರಾವು ಸಂಖ್ಯೆ:224:</u>**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಕಾಮಗಾರಿಕ್ರಮ ಸಂಖ್ಯೆ 1 ರಿಂದ 5ರವರೆಗಿನ ಆಯಾ ಕಾಮಗಾರಿಗಳ ಮುಂದೆ ಕಾಣಿಸಿರುವ ಆಯಾ ಅಂದಾಜು ವೆಚ್ಚಗಳಿಗೆ ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿತು.

**ವಿಷಯ ಸಂಖ್ಯೆ:225:**

ಮಹಾನಗರಪಾಲಿಕೆ, ಬಳ್ಳಾರಿಯ 2008–09 ನೇ ಸಾಲಿನಲ್ಲಿ ಪ್ರತಿ ವಾರ್ಡಿಗೆ ಸಾಮಾನ್ಯ ನಿಧಿಯಿಂದ ರೂ.30.00 ಲಕ್ಷಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್ ಕರೆದಾಗ 10ನೇ ವಾರ್ಡಿನಲ್ಲಿ ಟೆಂಡರ್‌ಗಳು ಸ್ವೀಕೃತಿವಾಗದೇ ಇರುವುದರಿಂದ ಈ ಕೆಳಗೆ ವಿವರಿಸಿದ ಕಾಮಗಾರಿಗಳನ್ನು ಪುನಃ ಟೆಂಡರ್ ಕರೆಯಲು ಮಾನ್ಯ ಮಹಾಪೌರರು ಇವರು ದಿನಾಂಕ :29.05.2009 ರಂದು ಸಭೆಯ ನಿರೀಕ್ಷಣೆ ಮಂಜೂರಾತಿ ಮೇರೆಗೆ ಅಂದಾಜು ಮೊತ್ತಗಳಿಗೆ ಮಂಜೂರಾತಿ ನೀಡಿ ಟೆಂಡರ್ ಕರೆಯಲು ಆದೇಶಿಸಿರುವುದರಿಂದ ಸದರಿ ದಿನಾಂಕದಂದು ಟೆಂಡರ್ ಕರೆಯಲಾಗಿ ದಿನಾಂಕ :01.06.2009 ರ ಈ ನಮ್ಮ ಕನ್ನಡನಾಡು ದಿನಪತ್ರಿಕೆಯಲ್ಲಿ ಪ್ರಕಟಣೆ ನೀಡಿದ ಪ್ರಕಾರ ಸದರಿ ಕಾಮಗಾರಿಗಳಿಗೆ ದಿನಾಂಕ :20.06.2009 ರಂದು ಸ್ವೀಕೃತವಾದ ಟೆಂಡರ್‌ಗಳನ್ನು ತೆರೆಯಲಾಗಿ ಇತರರಿಗಿಂತ ಶ್ರೀ ಕೆ.ಮಲ್ಲಯ್ಯ ಗುತ್ತಿಗೆದಾರರು ಸೂಚಿಸಿದ ಕಡಿಮೆ ಧರವನ್ನು ಮಾನ್ಯ ಮಹಾಪೌರರು, ದಿನಾಂಕ :28.06.2009 ರಂದು ಸಭೆಯ ಮಂಜೂರಾತಿ ನಿರೀಕ್ಷಣೆ ಮೇರೆಗೆ ಸದರಿ ಟೆಂಡರ್ ಧರಗಳನ್ನು ಅಂಗೀಕರಿಸಿ ಆದೇಶಿಸಿರುವುದರಿಂದ ಶ್ರೀ ಕೆ.ಮಲ್ಲಯ್ಯ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ ಕ್ರಮವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ಕ್ರ. ಸಂ | ಕಾಮಗಾರಿ ವಿವರ | ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) | ಗುತ್ತಿಗೆದಾರ ಗೆ ಟೆಂಡರ್ ನೀಡಿದ ಮೊತ್ತ |
|---|---|---|---|
| 1 | 2 | 3 | 4 |
| 1. | 10ನೇ ವಾರ್ಡ್ ಮರಾಠಿ ಬಿಕ್ಕೋಜಿರಾವ್ ರಸ್ತೆಯಿಂದ (ಪೂರ್ವ ದಿಕ್ಕಿನಲ್ಲಿರುವ) ಪಾತಕಂದಕಂ ಬೀದಿಯವರೆಗೆ ಸಿ.ಸಿ. ನೆಲಹಾಸು ಮಾಡುವುದು | 4.90 | ಅಂದಾಜು ವೆಚ್ಚಕ್ಕೆ ಶೇ 6 ಹೆಚ್ಚು |
| 2 | 10ನೇ ವಾರ್ಡ್ ಸೊಲ್ಲಾಪುರ ಮಸೀದಿಯಿಂದ ನೇವ್ವಾರ ಓಣಿಗೆ ಸಿ.ಸಿ. ನೆಲಹಾಸು ಮಾಡುವುದು | 8.20 | ಅಂದಾಜು ವೆಚ್ಚಕ್ಕೆ ಶೇ 5.98 ಹೆಚ್ಚು |
| 3 | 10ನೇ ವಾರ್ಡ್ ಮಾರ್ಕೆಟ್ ಪ್ಯಾರಲಲ್ ರಸ್ತೆಗೆ ಸಿ.ಸಿ. ನೆಲಹಾಸು ಮಾಡುವುದು | 5.50 | ಅಂದಾಜು ವೆಚ್ಚಕ್ಕೆ ಶೇ 5.76 ಹೆಚ್ಚು |
| 4 | 10ನೇ ವಾರ್ಡ್ ಕುರುಬರ ಓಣಿ, ಚಾಲೇಶ್ವರ ಗುಡಿ ಹಿಂಭಾಗದ ಲಿಂಕ್ ರಸ್ತೆಗಳಿಗೆ ಸಿ.ಸಿ. ನೆಲಹಾಸು ಮಾಡುವುದು | 8.80 | ಅಂದಾಜು ವೆಚ್ಚಕ್ಕೆ ಶೇ 5.60 ಹೆಚ್ಚು |
| 5 | 10ನೇ ವಾರ್ಡ್ ಆಂದ್ರಾಳ್ ರಸ್ತೆಯಿಂದ ವೀರಶೈವ ರುದ್ರಭೂಮಿ ಕಾಂಪೌಂಡ್ ವರೆಗೆ ಸಿ.ಸಿ. ನೆಲಹಾಸು ಮಾಡುವುದು | 6.10 | ಅಂದಾಜು ವೆಚ್ಚಕ್ಕೆ ಶೇ 5.83 ಹೆಚ್ಚು |

**ಠರಾವು ಸಂಖ್ಯೆ:225:**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಕಾಮಗಾರಿ ಕ್ರಮ ಸಂಖ್ಯೆ: 1 ರಿಂದ 5ರವರೆಗಿನ ಆಯಾ ಕಾಮಗಾರಿಗಳ ಮುಂದೆ ಕಾಣಿಸಿರುವ ಅಂದಾಜು ವೆಚ್ಚಗಳನ್ನು ಮಂಜೂರಿಸಿ, ಕಡಿಮೆ ಧರದ ಟೆಂಡರುಗಳನ್ನು ಅಂಗೀಕರಿಸಿದ ಮಹಾಪೌರರ ಕ್ರಮಕ್ಕೆ ಮತ್ತು ಸದ್ರಿ ಕಡಿಮೆ ಟೆಂಡರ್ ಧರ ಕಾಣಿಸಿದ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ ಕ್ರಮಕ್ಕೆ ಸಭೆ ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು.

**ವಿಷಯ ಸಂಖ್ಯೆ:226:**

ಮಹಾನಗರಪಾಲಿಕೆ, ಬಳ್ಳಾರಿಯ 2009-10 ನೇ ಸಾಲಿನಲ್ಲಿ ಈ ಕೆಳಗೆ ವಿವರಿಸಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ' ಈ ಕೆಳಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿ ಸದರಿ ಕಾಮಗಾರಿಯ ಅಂದಾಜು ವೆಚ್ಚಗಳಿಗೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲು ಸಭೆಗೆ ಮಂಡಿಸಿದೆ.

| ಕ್ರ.ಸಂ. | ಕಾಮಗಾರಿ ವಿವರ | ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 1 | 2 | 3 |
| 1. | ನಗರದ 28ನೇ ವಾರ್ಡ್, ಆಲದಹಳ್ಳಿ ರಸ್ತೆಯಿಂದ ಬಂಡಿಹಟ್ಟಿ ವರೆಗೆ ಸ್ಮಶಾನದ ರಸ್ತೆವರೆಗೆ ಸೈಜುಕಲ್ಲು ನಿರ್ಮಾಣದ ಕಾಮಗಾರಿ | 860000 |
| 2 | ನಗರದ 28ನೇ ವಾರ್ಡ್, ಆಲದಹಳ್ಳಿ ರಸ್ತೆಯಿಂದ ಬಂಡಿಹಟ್ಟಿ ವರೆಗೆ ಸ್ಮಶಾನದ ರಸ್ತೆಗೆ ಮೆಟಲಿಂಗ್ ಮಾಡುವ ಕಾಮಗಾರಿ | 655000 |
| 3 | ನಗರದ 28ನೇ ವಾರ್ಡ್, ಆಲದಹಳ್ಳಿ ರಸ್ತೆಯಿಂದ ಬಂಡಿಹಟ್ಟಿ ವರೆಗೆ ಸ್ಮಶಾನದ ಲಿಂಕ್ ರಸ್ತೆಗೆ ಸೈಜುಕಲ್ಲು ನಿರ್ಮಾಣದ ಕಾಮಗಾರಿ | 105000 |
| 4 | ಪಾರ್ವತಿನಗರ ದುರ್ಗಮ್ಮ ಗುಡಿ ಹತ್ತಿರ ವಡಾಫೋನ್ ಕಛೇರಿ ಬಗಲಿಗೆ ಚರಂಡಿ ನಿರ್ಮಿಸಿ ಸ್ಲಾಬ್ ಹಾಕುವ ಕಾಮಗಾರಿ | 155000 |
| 5 | ನಗರದ 12ನೇ ವಾರ್ಡ್‌ನ ಮುಲ್ಲಂಗಿ ಸಂಜೀವಪ್ಪ ಬೀದಿ ಎಡಭಾಗ ರೂಪನಗುಡಿ ಮುಖ್ಯರಸ್ತೆ ಜಂಕ್ಷನ್‌ನಿಂದ ತೇರು ಬೀದಿವರೆಗೆ ಸೈಜುಕಲ್ಲು ಚರಂಡಿ ನಿರ್ಮಾಣ | 972000 |

**ಠರಾವು ಸಂಖ್ಯೆ:226:**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಕಾಮಗಾರಿ ಕ್ರಮ ಸಂಖ್ಯೆ 1 ರಿಂದ 5ರವರೆಗಿನ ಆಯಾ ಕಾಮಗಾರಿಗಳ ಮುಂದೆ ಕಾಣಿಸಿರುವ ಆಯಾ ಅಂದಾಜು ವೆಚ್ಚಗಳಿಗೆ ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿತು.

**ವಿಷಯ ಸಂಖ್ಯೆ:227:**

ಬಳ್ಳಾರಿ ಮಹಾನಗರಪಾಲಿಕೆಯಿಂದ ನಗರ ವ್ಯಾಪ್ತಿಯಲ್ಲಿ ಸಿವಿಲ್ ಇಂಜಿನಿಯರ್‌ಗಳು ಕಟ್ಟಡ ನಿರ್ಮಾಣಗಳಿಗಾಗಿ ನೀಲಿ ನಕಾಶೆಗಳನ್ನು ತಯಾರಿಸಲು ಹಾಗೂ ಕಟ್ಟಡದ ನಿರ್ಮಾಣದ ಉಸ್ತುವಾರಿಯನ್ನು ನಿರ್ವಹಿಸಲು ಈ ಮಹಾನಗರಪಾಲಿಕೆಯಿಂದ ಕನ್ಸಲ್ಟಿಂಗ್ ಇಂಜಿನಿಯರ್‌ರವರಾಗಿ ಅಧಿಕೃತವಾಗಿ ನೊಂದಣಿ ಮಾಡಿಕೊಳ್ಳಲು ಶುಲ್ಕ ರೂ.5000/- ಹಾಗೂ ನವೀಕರಣಕ್ಕಾಗಿ ರೂ.2500/- ಮತ್ತು ಸಿವಿಲ್ ಗುತ್ತಿಗೆದಾರರ ನೊಂದಣಿ/ ನವೀಕರಣ ಶುಲ್ಕ ಬ್ಲಾಕ್ ಅವಧಿಗೆ (ಪ್ರತಿ 5 ವರ್ಷಕ್ಕೆ) ರೂ.10,000/- ಗಳನ್ನು ನಿಗಧಿಪಡಿಸಲಾಗಿದ್ದು, ಹಾಗೂ ಈ ಕೆಳಕಂಡ ಪ್ರಮಾಣ ಪತ್ರಗಳಿಗೆ ಈ ಕೆಳಕಂಡಂತೆ ಶುಲ್ಕವನ್ನು ನಿಗಧಿಪಡಿಸಿದೆ.

1. ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ ರೂ.500/-
2. ಕಟ್ಟಡ ನೆಲಸಮಗೊಳಿಸುವ ಪ್ರಮಾಣ ಪತ್ರ ರೂ.500/-
3. ಕಟ್ಟಡ ಆಯುಷ್ಯ ಪ್ರಮಾಣ ಪತ್ರ ರೂ.500/-
4. ಇತರೆ ದೃಢೀಕರಣ ಪತ್ರಗಳಿಗೆ ರೂ.500/-

ಪ್ರಯುಕ್ತ ಮೇಲ್ಕಂಡ ಧರಗಳನ್ನು ವಸೂಲಿ ಮಾಡಲು ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

...12

**ಠರಾವು ಸಂಖ್ಯೆ:227:**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಶಿಫಾರಸ್ಸಿನ ಮೇರೆಗೆ ಕೆಳಕಾಣಿಸಿದ ನೊಂದಣಿ ಶುಲ್ಕ, ಪರವಾನಿಗೆ ನವೀಕರಣ ಶುಲ್ಕ ಮತ್ತು ಪ್ರಮಾಣ ಪತ್ರ ಶುಲ್ಕಗಳನ್ನು ಸಭೆಯು ಸರ್ವಾನುಮತದಿಂದ ನಿಗಧಿಪಡಿಸಿ ತಕ್ಷಣದಿಂದಲೇ ವಸೂಲಿ ಮಾಡಲು ಮಂಜೂರಾತಿಯನ್ನು ನೀಡಿತು.

| | | | |
|---|---|---|---|
| 1) | (i) | ಸಿವಿಲ್ ಇಂಜಿನೀಯರ್‌ಗಳು ಕಟ್ಟಡ ನಿರ್ಮಾಣಗಳಿಗಾಗಿ ನೀಲಿ ನಕಾಶೆಗಳನ್ನು ತಯಾರಿಸಲು ಹಾಗೂ ಉಸ್ತುವಾರಿಯನ್ನು ನಿರ್ವಹಿಸಲು ಕನ್ಸಲ್ಟಿಂಗ್ ಇಂಜಿನೀಯರ್‌ರಾಗಿ ಹೊಸದಾಗಿ ನೊಂದಾಯಿಸಿಕೊಳ್ಳಲು ನೊಂದಣಿ ಶುಲ್ಕ : | ರೂ.5000–00 |
| | (ii) | ಸಿವಿಲ್ ಇಂಜಿನೀಯರ್‌ಗಳು ಕಟ್ಟಡ ನಿರ್ಮಾಣಗಳಿಗಾಗಿ ನೀಲಿ ನಕಾಶೆಗಳನ್ನು ತಯಾರಿಸಲು ಹಾಗೂ ಉಸ್ತುವಾರಿಯನ್ನು ನಿರ್ವಹಿಸಲು ಕನ್ಸಲ್ಟಿಂಗ್ ಇಂಜಿನೀಯರ್‌ರ ಪರವಾನಿಗೆ ನವೀಕರಣ ಶುಲ್ಕ (ಪ್ರತಿಯೊಂದು ವರ್ಷಕ್ಕೆ) | ರೂ.2500–00 |
| 2) | (i) | ಸಿವಿಲ್ ಗುತ್ತಿಗೆದಾರರ ನೊಂದಣಿ ಶುಲ್ಕ | ರೂ.10000–00 |
| | (ii) | ಸಿವಿಲ್ ಗುತ್ತಿಗೆದಾರರ ಪರವಾನಿಗೆ ನವೀಕರಣಕ್ಕಾಗಿ ಶುಲ್ಕ ಬ್ಲಾಕ್ ಅವಧಿಗೆ (ಪ್ರತಿ 5 ವರ್ಷಕ್ಕೆ) | ರೂ.10,000–00 |
| 3) | | ಕಟ್ಟಡ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ ಶುಲ್ಕ | ರೂ.500–00 |
| 4) | | ಕಟ್ಟಡ ನೆಲಸಮಗೊಳಿಸುವ ಬಗ್ಗೆ ಪ್ರಮಾಣ ಪತ್ರ ಶುಲ್ಕ | ರೂ.500–00 |
| 5) | | ಕಟ್ಟಡ ಆಯುಷ್ಯ ಪ್ರಮಾಣ ಪತ್ರ ಶುಲ್ಕ | ರೂ.500–00 |
| 6) | | ಇತರೆ ದೃಢೀಕರಣ ಪತ್ರಗಳಿಗೆ ಶುಲ್ಕ | ರೂ.500–00 |

**ವಿಷಯ ಸಂಖ್ಯೆ:228:**

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ/49/ಎಸ್.ಎಫ್.ಸಿ/52/2007, ದಿನಾಂಕ: 25.06.2007 ಮತ್ತು ಸಂ:ನಅಇ/22/ಎಸ್.ಎಫ್.ಸಿ/2007, ದಿ:05.06.2007 ನೇದ್ದರಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ರೂ.1238.36 ಲಕ್ಷಗಳು ಮುಕ್ತನಿಧಿ ಅನುದಾನವನ್ನು 2007–08 ನೇ ಸಾಲಿನಲ್ಲಿ ಮಂಜೂರು ಮಾಡಲಾಗಿ ಆದೇಶ ಹೊರಡಿಸಲಾಗಿದ್ದು, ಅದರಂತೆಯೇ ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬಡಾವಣೆಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕೆಲವು ಕಾಮಗಾರಿಗಳನ್ನು ವಿವಿಧ ಕಾರಣಗಳಿಂದ ಕೈಗೊಳ್ಳಲಾಗದೆ ಉಳಿದುಕೊಂಡಿರುವ ಹಣದಲ್ಲಿ ಅದಕ್ಕೆ ಬದಲಾಗಿ ಬೇರೆ ಅಭಿವೃದ್ಧಿ ಕಾಮಗಾರಿ ಹಾಗೂ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಅವುಗಳ ಮುಂದೆ ಕಾಣಿಸಿದ ಅಂದಾಜು ವೆಚ್ಚಗಳನ್ನು ಮಂಜೂರಿಸಲು ಮತ್ತು ಕೈಗೊಳ್ಳದಿರುವ ಕಾಮಗಾರಿಗಳನ್ನು ರದ್ದುಪಡಿಸಲು ಸಭೆಯ ಮಂಜೂರಾತಿಗಾಗಿ ಮಂಡಿಸಿದೆ.

## ಕ್ರಿಯಾ ಯೋಜನೆ

**ರದ್ದುಪಡಿಸಬೇಕಾದ ಕಾಮಗಾರಿಗಳು**

| 2007–08 ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನದಲ್ಲಿ ಉಳಿಕೆಗೊಂಡಿರುವ ಹಣಕ್ಕೆ ರದ್ದುಪಡಿಸಬೇಕಾದ ಕಾಮಗಾರಿಗಳು/ ಕೆಲಸಗಳ ವಿವರ | | |
|---|---|---|
| ಕ್ರ.ಸಂ | ಕಾಮಗಾರಿ/ ಕೆಲಸದ ಹೆಸರು | ಅಂದಾಜು ಮೊತ್ತ |
| 1 | ಬಳ್ಳಾರಿ ನಗರದ ಗ್ರಹಂ ರಸ್ತೆಯಲ್ಲಿರುವ ಮಾರುಕಟ್ಟೆ ನಿರ್ಮಾಣಕ್ಕಾಗಿ | 1,20,00,000.00 |

**ಹೊಸದಾಗಿ ಕೈಗೊಳ್ಳಬೇಕಾದ ಕಾಮಗಾರಿಗಳು**

| 2007–08 ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನದಲ್ಲಿ ಉಳಿಕೆಗೊಂಡಿರುವ ಹಣಕ್ಕೆ ರದ್ದುಪಡಿಸಿದ ಕಾಮಗಾರಿಯಿಂದ/ ಕಾಮಗಾರಿ ಪೂರ್ಣಗೊಳಿಸಿದ ಉಳಿದ ಹಣಕ್ಕೆ ಕೈಗೊಳ್ಳಬೇಕಾದ ಕೈಗೊಳ್ಳಬೇಕಾದ ಕಾಮಗಾರಿಗಳ ವಿವರ | | |
|---|---|---|
| ಕ್ರ.ಸಂ | ಕಾಮಗಾರಿ/ ಕೆಲಸದ ಹೆಸರು | ಅಂದಾಜು ಮೊತ್ತ |
| 1 | ಬಳ್ಳಾರಿ ನಗರದ ರಾ.ಹೆ–63 ರ ರಸ್ತೆಯಲ್ಲಿರುವ ಅಕ್ಕ–ಪಕ್ಕದಲ್ಲಿರುವ ನಾಗರೀಕ ಸೌಲಭ್ಯಗಳನ್ನು ಸ್ಥಳಾಂತರಿಸುವ ಕಾಮಗಾರಿ | 25,00,000.00 |

| | | |
|---|---|---|
| 2 | ಬಳ್ಳಾರಿ ನಗರದ ಪ.ಜಾ/ಪ.ಪಂಗಡದ ವರ್ಗದವರಿಗೆ ಬಿಸಿಲಹಳ್ಳಿ ಮತ್ತು ಮುಂಡ್ರಿಗಿ 2 ಬಡಾವಣೆಗಳಲ್ಲಿ ಸಮುದಾಯ ಭವನ ನಿರ್ಮಾಣಕ್ಕಾಗಿ ಶೇ 18ರ ಅಡಿಯಲ್ಲಿ | 10,80,000.00 |
| 3 | ಬಳ್ಳಾರಿ ನಗರದ ಪ.ಜಾ/ಪ.ಪಂಗಡದವರ ಫಲಾನುಭವಿಗಳಿಗೆ ಪ್ರತ್ಯೇಕ ಶೌಚಾಲಯಗಳ ನಿರ್ಮಾಣಕ್ಕಾಗಿ ಶೇ 18ರ ಅಡಿಯಲ್ಲಿ | 20,00,000.00 |
| 4 | 2007–08ನೇ ಸಾಲಿನಲ್ಲಿ ಬಿಡುಗಡೆಯಾದ ಮುಕ್ತನಿಧಿ ಅನುದಾನದಲ್ಲಿ ಉಳಿಕೆಗೊಂಡಿರುವ ಹಣ | 10,00,000.00 |
| | **ಒಟ್ಟು ರೂ.** | **1,60,80,000.00** |

| | | |
|---|---|---|
| 2 | ಬಳ್ಳಾರಿ ನಗರದ ಅಗ್ನಿಶಾಮಕ ಠಾಣೆ ಹತ್ತಿರ ನೀರಿನ ಕೊಳವೆ ಮಾರ್ಗವನ್ನು ಅಳವಡಿಸುವ ಕಾಮಗಾರಿ | 30,00,000.00 |
| 3 | ಬಳ್ಳಾರಿ ನಗರದ ಅಲ್ಲಿಪುರ ಜಲಸಂಗ್ರಹಗಾರಕ್ಕೆ ಕಾಲುವೆಯಿಂದ ನೀರನ್ನು ಪಂಪ್ ಮಾಡಲು ಯಂತ್ರಗಳನ್ನು ಖರೀದಿಸಲು ಕೆ.ಯು.ಡಬ್ಲ್ಯೂ.ಎಸ್. &ಡಿ.ಬಿ ಇವರಿಗೆ ಹಣ ಪಾವತಿಸಲು | 75,00,000.00 |
| 4 | ಬಳ್ಳಾರಿ ನಗರದ ಬಾಪೂಜಿ ನಗರದ ಚಲುವಾದಿ ಗೇರಿ ಬಡಾವಣೆಯಲ್ಲಿ ಶೇ 18ರಡಿಯಲ್ಲಿ ರಸ್ತೆಗಳಿಗೆ ಮೆಟಲಿಂಗ್ ಮತ್ತು ಡಾಂಬರೀಕರಣ ಮಾಡುವುದು | 10,00,000.00 |
| 5 | ಬಳ್ಳಾರಿ ನಗರದ ಪ.ಜಾ/ ಪ.ಪಂಗಡದ ಬಡಾವಣೆಗಳಲ್ಲಿ ಶೇ 18ರಡಿಯಲ್ಲಿ ಚರಂಡಿಗಳ ಹೂಳನ್ನು ತೆಗೆಯುವುದು | 10,00,000.00 |
| 6 | ನಗರದ ಬಿಸಿಲಹಳ್ಳಿ ಪ.ಜಾ/ ಪ.ಪಂಗಡದ ಪ್ರದೇಶದ ಶೇ 18 ರಡಿಯಲ್ಲಿ ಸಮುದಾಯ ಭವನ ನಿರ್ಮಿಸುವುದು | 10,80,000.00 |
| | **ಒಟ್ಟು ರೂ.** | **1,60,80,000.00** |

ಮೇಲ್ಕಾಣಿಸಿದ ನಾಲ್ಕು ಕಾಮಗಾರಿಗಳ ಉಳಿಕೆ ಹಣ ರೂ.1,60,80,000.00 ಗಳನ್ನು ರದ್ದುಪಡಿಸಿ ಹೊಸದಾಗಿ 6 ಕಾಮಗಾರಿಗಳನ್ನು ರೂ.1,60,80,000.00 ಗಳಿಗೆ ಕ್ರಿಯಾ ಯೋಜನೆ ತಯಾರಿಸಲಾಗಿದೆ. ಕಾರಣ ಮೇಲ್ಕಾಣಿಸಿದ ಕ್ರಿಯಾ ಯೋಜನೆ ಮತ್ತು ಅಂದಾಜು ಪಟ್ಟಿಗಳಿಗೆ ಅನುಮೋದನೆ ನೀಡಲು ಹಾಗೂ ಆಡಳಿತಾತ್ಮಕ ಮಂಜೂರಾತಿ ಮತ್ತು ತುರ್ತು ಟೆಂಡರ್ ಪ್ರಕಟಣೆಯ ಅನುಮತಿ ಪಡೆಯಲು ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಸಲ್ಲಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**<u>ಠರಾವು ಸಂಖ್ಯೆ:228:</u>**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವಂತೆ ತಯಾರಿಸಿದ ಕ್ರಿಯಾ ಯೋಜನೆಯಲ್ಲಿ "ರದ್ದು ಪಡಿಸಬೇಕಾದ ಕಾಮಗಾರಿಗಳು" ಶೀರ್ಷಿಕೆಯಡಿಯಲ್ಲಿ ರೂ.1,60,80,000/–ಗಳ ಮೊತ್ತದ ಒಟ್ಟು 4 ಕಾಮಗಾರಿಗಳನ್ನು ಸಭೆ ಸರ್ವಾನುಮತದಿಂದ ರದ್ದುಪಡಿಸಿತು ಮತ್ತು ಈ ರದ್ದು ಪಡಿಸಿದ ಕಾಮಗಾರಿಗಳ ಬದಲಿಗೆ "ಹೊಸದಾಗಿ ಕೈಗೊಳ್ಳಬೇಕಾದ ಕಾಮಗಾರಿಗಳು" ಶೀರ್ಷಿಕೆಯಡಿಯಲ್ಲಿ ಕಾಣಿಸಿರುವ ಕ್ರಿಯಾ ಯೋಜನೆಗೆ ಮತ್ತು 6 ಆಯಾ ಕಾಮಗಾರಿಗಳ ಮುಂದೆ ಕಾಣಿಸಿದ ಆಯಾ ಅಂದಾಜು ವೆಚ್ಚಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ಮತ್ತು ಈ ಬಗ್ಗೆ ತುರ್ತು ಟೆಂಡರ್‌ಗಳನ್ನು ಕರೆಯಲು ಅನುಮತಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

…14

**ವಿಷಯ ಸಂಖ್ಯೆ:229:**

ಬಳ್ಳಾರಿ ನಗರ ವ್ಯಾಪ್ತಿಯಲ್ಲಿಯ ನೀರಿನ ಕೊಳಾಯಿಗಳಿಂದ ಅಂದರೆ ಗೃಹ ಬಳಕೆ ಗೃಹೇತರ ವಾಣಿಜ್ಯ ಕೊಳಾಯಿಗಳಿಗೆ ಪ್ರಸ್ತುತ ವಸೂಲಿ ಮಾಡುತ್ತಿರುವ ನೀರಿನ ಶುಲ್ಕ ಧರಗಳು ಬಹಳ ಕಡಿಮೆ ಇದ್ದು , ಅವುಗಳನ್ನು ಈ ಕೆಳಕಾಣಿಸಿದಂತೆ, ಪರಿಷ್ಕರಿಸಿ ಹೆಚ್ಚಿಸುವುದು ಅವಶ್ಯವಾಗಿರುತ್ತದೆ.

| ಕ್ರ.ಸಂ. | ನಳಗಳ ವಿವರಣೆ | ಪ್ರಸ್ತು ಧರ ತಿಂಗಳಿಗೆ | ಪರಿಷ್ಕರಿಸಿ ಹೆಚ್ಚಿಸಬೇಕಾದ ಧರ ತಿಂಗಳಿಗೆ |
|---|---|---|---|
| 1. | ಗೃಹ ಬಳಕೆ | 60.00 | 100.00 |
| 2. | ಗೃಹೇತರ ಬಳಕೆ | 120.00 | 220.00 |
| 3. | ವಾಣಿಜ್ಯ ಬಳಕೆ | 240.00 | 500.00 |

ಅಲ್ಲದೇ ನೀರಿನ ಕೊಳಾಯಿಗಳ ಸಂಪರ್ಕಗಳಿಗಾಗಿ ಪ್ಲಂಬಿಂಗ್ ಪರವಾನಿಗೆ ಹಾಗೂ ನವೀಕರಣ ಶುಲ್ಕಗಳು ಸಹಾ ಕಡಿಮೆ ಇದ್ದು, ಅವುಗಳನ್ನು ಸಹಾ ಹೆಚ್ಚಿಸಬೇಕಾಗಿರುತ್ತದೆ.

| ಕ್ರ.ಸಂ. | ಪ್ಲಂಬಿಂಗ್ ಪರವಾನಿಗೆ ಒಂದು ವರ್ಷಕ್ಕೆ | ಪ್ರಸ್ತುತ ದರ | ಹೆಚ್ಚಿಸಬೇಕಾದ ದರ |
|---|---|---|---|
| 1. | ಪ್ಲಂಬಿಂಗ್ | 500.00 | 2000.00 |
| 2. | ನವೀಕರಣಕ್ಕಾಗಿ | 500.00 | 1000.00 |

ಮೇಲ್ಕಾಣಿಸಿದ ವಿಷಯದ ಬಗ್ಗೆ ಧರಗಳನ್ನು ಪರಿಷ್ಕರಿಸಿ ಹೆಚ್ಚಿಸಲು ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

**ಠರಾವು ಸಂಖ್ಯೆ:229:**

ಬಳ್ಳಾರಿ ನಗರ ವ್ಯಾಪ್ತಿಯಲ್ಲಿಯ ಹಾಲಿ ವಸೂಲಿ ಮಾಡುತ್ತಿರುವ ನೀರಿನ ಕೊಳಾಯಿ ಶುಲ್ಕಗಳು ಅತಿ ಕಡಿಮೆಯಾಗಿದ್ದು, ನೀರು ಸರಬರಾಜಿಗೆ ತಗಲುತ್ತಿರುವ ಹೆಚ್ಚಿನ ಖರ್ಚು ವೆಚ್ಚಗಳಿಗೆ ಸ್ವಲ್ಪ ಮಟ್ಟಿಗೆ ಸರಿದೂಗಿಸಿಕೊಳ್ಳುವ ದೃಷ್ಠಿಯಿಂದ ಕೊಳಾಯಿ ಶುಲ್ಕ ಪರಿಷ್ಕರಿಸಿ ಹೆಚ್ಚಿಸುವುದು ಅನಿವಾರ್ಯವಾಗಿದ್ದು, ಆ ಪ್ರಯುಕ್ತ ನೀರಿನ ಕೊಳಾಯಿ ಶುಲ್ಕಗಳನ್ನು ಪರಿಷ್ಕರಿಸಿ ಸಭೆ ಸರ್ವಾನುಮತದಿಂದ ಈ ಕೆಳಗಿನಂತೆ ನಿಗಧಿಪಡಿಸಿತು ಮತ್ತು ಈ ನಿಗಧಿಪಡಿಸಿದ ಶುಲ್ಕಗಳನ್ನು ದಿನಾಂಕ:01.11.2009ರಿಂದ ಜಾರಿಗೊಳಿಸಿ ವಸೂಲಿ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| ಕ್ರ.ಸಂ | ನೀರಿನ ಕೊಳಾಯಿಗಳ ವರ್ಗೀಕರಣ | ಪರಿಷ್ಕರಿಸಿ ನಿಗಧಿಪಡಿಸಿದ ಶುಲ್ಕ ತಿಂಗಳಿಗೆ |
|---|---|---|
| 1. | ಗೃಹ ಬಳಕೆಗಾಗಿ | ರೂ.100.00 |
| 2. | ಗೃಹೇತರ ಬಳಕೆಗಾಗಿ | ರೂ.220.00 |
| 3. | ವಾಣಿಜ್ಯ ಬಳಕೆಗಾಗಿ | ರೂ.500.00 |

ಹಾಗೂ ನೀರಿನ ಕೊಳಾಯಿ ಸಂಪರ್ಕ ಕಲ್ಪಿಸಲು ಪ್ಲಂಬಿಂಗ್ ಪರವಾನಿಗೆ ಮತ್ತು ನವೀಕರಣ ಶುಲ್ಕಗಳನ್ನು ಪರಿಷ್ಕರಿಸಿ ಈ ಕೆಳಗಿನಂತೆ ಸಭೆ ಸರ್ವಾನುಮತದಿಂದ ನಿಗಧಿಪಡಿಸಿತು ಮತ್ತು ಈ ನಿಗಧಿಪಡಿಸಿದ ಶುಲ್ಕಗಳನ್ನು ದಿನಾಂಕ:01.09.2009ರಿಂದ ಜಾರಿಗೊಳಿಸಿ ವಸೂಲಿ ಮಾಡಲು ಸರ್ವಾನುಮತದಿಂದ ಸಭೆ ತೀರ್ಮಾನಿಸಿತು.

| ಕ್ರ.ಸಂ | ವಿವರ | ಪರಿಷ್ಕರಿಸಿ ನಿಗಧಿಪಡಿಸಿದ ಶುಲ್ಕ |
|---|---|---|
| 1. | ಪ್ಲಂಬಿಂಗ್ ಪರವಾನಿಗೆ ಒಂದು ವರ್ಷಕ್ಕೆ | ರೂ.2000.00 |
| 2. | ಪ್ಲಂಬಿಂಗ್ ಪರವಾನಿಗೆ ನವೀಕರಣಕ್ಕಾಗಿ ಒಂದು ವರ್ಷಕ್ಕೆ | ರೂ.1000.00 |

…15

**ವಿಷಯ ಸಂಖ್ಯೆ:230:**

ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರ ಖಾಲಿ ನಿವೇಶನಗಳ ಜಾಗದಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಜಾಲಿ ಗಿಡಗಳು , ಕಸಕಡ್ಡಿಗಳು ಇತರೆ ಗಿಡಗಳು ಬೆಳೆಯುತ್ತಿರುವುದರಿಂದ ಉತ್ಪತ್ತಿಯಾಗುವ ಸೊಳ್ಳೆಗಳಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಆದುದರಿಂದ ಖಾಲಿ ನಿವೇಶನಗಳನ್ನು ಹೊಂದಿರುವ ಮಾಲೀಕರು ಜಾಲಿಗಿಡ, ಕಸಕಡ್ಡಿ ಇತರೆ ಗಿಡಗಳನ್ನು ಕೂಡಲೇ ತೆಗೆಸುವಂತೆ ಸೂಚಿಸುವುದು. ಒಂದು ವೇಳೆ ತೆರವುಗೊಳಿಸದೇ ಇರುವ ಗಿಡಗಳನ್ನು, ಕಸ ಕಡ್ಡಿಗಳನ್ನು ಮಹಾನಗರಪಾಲಿಕೆಯಿಂದ ಸ್ವಚ್ಛಗೊಳಿಸಿ ಅದಕ್ಕೆ ಖರ್ಚಾಗುವ ವೆಚ್ಚವನ್ನು ಸಂಬಂಧಿಸಿದ ಮಾಲೀಕರ ಮನೆ ಕಂದಾಯ ಖಾತೆಯಲ್ಲಿ ಜಮಾ ಮಾಡಿ ಕಂದಾಯ ಬಾಕಿ ಎಂದು ಪರಿಗಣಿಸಲಾಗುವುದು.

ಖಾಲಿ ನಿವೇಶನಗಳಲ್ಲಿನ ಗಿಡಗಳನ್ನು ಪಾಲಿಕೆಯಿಂದ ಸ್ವಚ್ಛಗೊಳಿಸಲು ಖರ್ಚಾಗುವ ಹಣ ಈ ಕೆಳಗಿನಂತಿದೆ.

1) 20x30 ಅಡಿ ನಿವೇಶನಕ್ಕೆ ರೂ.250/–
2) 30x40 ಅಡಿ ನಿವೇಶನಕ್ಕೆ ರೂ.500/–
3) 60x40 ಅಡಿ ನಿವೇಶನಕ್ಕೆ ರೂ.1000/–
4) 50x80 ಅಡಿ ನಿವೇಶನಕ್ಕೆ ರೂ.2500/–ಗಳು

ಎಂದು ಪರಿಗಣಿಸಿ ಸದರಿ ಹಣವನ್ನು ಸಂಬಂಧಪಟ್ಟವರ ನಿವೇಶನದ ಖಾತೆಯಲ್ಲಿ ಕಂದಾಯ ಬಾಕಿ ಎಂದು ಜಮಾ ಮಾಡಿ ವಸೂಲಿಗೆ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಮಹಾಪೌರರು ಹಾಗೂ ಸಾಮಾನ್ಯ ಸಭೆಯ ಆಡಳಿತಾತ್ಮಕ ಮಂಜೂರಾತಿಗಾಗಿ ಸಭೆಗೆ ಮಂಡಿಸಲಾಗಿದೆ.

**ಠರಾವು ಸಂಖ್ಯೆ:230:**

ಬಳ್ಳಾರಿ ನಗರ ವ್ಯಾಪ್ತಿಯಲ್ಲಿಯಲ್ಲಿ ಖಾಸಗೀ ಖಾಲಿ ನಿವೇಶನಗಳ ಮಾಲೀಕರು ತಮ್ಮ ಖಾಲಿ ನಿವೇಶನಗಳಲ್ಲಿ ಕಟ್ಟಡಗಳನ್ನು ನಿರ್ಮಿಸದೇ ಹಾಗೆಯೇ ಬಿಟ್ಟಿರುವುದರಿಂದ ಸದ್ರಿ ಖಾಲಿ ನಿವೇಶನಗಳಲ್ಲಿ, ಜಾಲಿಗಿಡ ಇತರೆ ಗಿಡಗಂಟಿ ಕಸಕಡ್ಡಿ ಜಮಾವಣೆಯಾಗಿ ಪರಿಸರ ಕಲುಷಿತಗೊಂಡು ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗಿ ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗುತ್ತಿದೆ. ಪ್ರಯುಕ್ತ ಖಾಸಗಿ ಖಾಲಿ ನಿವೇಶನಗಳಲ್ಲಿಯ ಈ ಹಾನಿಕಾರಕ ತ್ಯಾಜ್ಯ ಜಮಾವಣೆಯನ್ನು ಅದರ ಮಾಲೀಕರು 15 ದಿನಗಳೊಳಗಾಗಿ ತೆಗೆದು ಸಾಗಿಸುವಂತೆ ಪಾಲಿಕೆಯಿಂದ ಸೂಚನಾ ಪತ್ರ ನೀಡುವುದು 15 ದಿನಗಳೊಳಗಾಗಿ ನಿವೇಶನ ಮಾಲೀಕರು ಅದನ್ನು ತೆಗೆದು ಸಾಗಿಸದಿದ್ದರೆ ಮಹಾನಗರಪಾಲಿಕೆಯಿಂದ ಅದೆಲ್ಲವನ್ನು ಸ್ವಚ್ಛಗೊಳಿಸಲು ತಗಲುವ ವೆಚ್ಚವನ್ನು ಈ ಕೆಳಗಿನಂತೆ ಸಭೆ ಸರ್ವಾನುಮತದಿಂದ ನಿಗಧಿಪಡಿಸಿ ಅದನ್ನು ಸಂಬಂಧಿಸಿದ ಖಾಲಿ ನಿವೇಶನದ ಮಾಲೀಕರಿಂದ ಅವರ ಕಂದಾಯದ ಖಾತೆಯಲ್ಲಿ ಸೇರಿಸಿ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲು ಸರ್ವಾನುಮತದಿಂದ ತೀರ್ಮಾನಿಸಿತು.

1) 20x30 ಅಡಿ ನಿವೇಶನಕ್ಕೆ ರೂ.250/–
2) 30x40 ಅಡಿ ನಿವೇಶನಕ್ಕೆ ರೂ.500/–
3) 60x40 ಅಡಿ ನಿವೇಶನಕ್ಕೆ ರೂ.1000/–
4) 50x80 ಅಡಿ ನಿವೇಶನಕ್ಕೆ ರೂ.2500/–

**ವಿಷಯ ಸಂಖ್ಯೆ:231:**

ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ ಅಭಿಲೇಖಾಲಯ ವಿಭಾಗಕ್ಕೆ ಸಂಬಂಧಪಟ್ಟಂತೆ, ಕಛೇರಿ ಉಪಯೋಗಕ್ಕಾಗಿ ದಿನನಿತ್ಯ ಬಳಸುವ ನಮೂನೆಗಳು, ಪುಸ್ತಕಗಳು ಹಾಗೂ ರಿಜಿಸ್ಟರ್‌ಗಳು ಇತ್ಯಾದಿಗಳನ್ನು ಮುದ್ರಿಸಲು 2009–10ನೇ ಸಾಲಿಗಾಗಿ ಅಗತ್ಯ ನಮೂನೆ ಮತ್ತು ಪುಸ್ತಕಗಳನ್ನು ಮುದ್ರಿಸಿ ತಯಾರಿಸಲು ಮಾನ್ಯ ಮಹಾಪೌರರ ಆದೇಶದ ಮೇರೆಗೆ ದಿನಾಂಕ:02.07.2008 ರಂದು ಟೆಂಡರ್‌ನ್ನು ಕರೆಯಲಾಗಿದ್ದು, ಸದರಿ ಟೆಂಡರ್‌ಗೆ ಪ್ರತಿಯಾಗಿ ಈ ಕೆಳಕಂಡ ಟೆಂಡರ್‌ದಾರರು ತಮ್ಮ ಧರಪಟ್ಟಿಗಳನ್ನು ಟೆಂಡರ್ ಅಂತಿಮ ದಿನಾಂಕ:03.08.2009 ರೊಳಗಾಗಿ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ.

1) ಕಸ್ತೂರಿ ಗ್ರಾಫಿಕ್ಸ್,ಬಳ್ಳಾರಿ
2) ಮಹಾಲಕ್ಷ್ಮೀ ಬುಕ್ ಮ್ಯಾನುಫ್ಯಾಕ್ಚರರ್ಸ್, ಬಳ್ಳಾರಿ
3) ರಾಜು ಪ್ರಿಂಟರ್ಸ್, (ಡಿ.ಡಿ. ಲಗತ್ತಿಸದ ಕಾರಣ ಟೆಂಡರ್ ರದ್ದುಪಡಿಸಲಾಗಿದೆ), ಬಳ್ಳಾರಿ
4) ಸಂಪೂರ್ಣ ಆಫ್ ಸ್ಕ್ರೀನ್ ಆಫ್ ಪ್ರಿಂಟರ್ಸ್, ಬಳ್ಳಾರಿ
5) ಆದರ್ಶ ಪ್ರಿಂಟರ್ಸ್, ಬಳ್ಳಾರಿ.

ಮೇಲಿನ ಟೆಂಡರ್‌ದಾರರು ಸಲ್ಲಿಸಿದ ಧರ ಪಟ್ಟಿಗಳನ್ನು ಪರಿಶೀಲಿಸಲಾಗಿ, ಬಂದ 5 ಕೊಟೇಷನ್‌ಗಳ ಪೈಕಿ ಶ್ರೀ ರಾಜು ಪ್ರಿಂಟರ್ಸ್, ಬಳ್ಳಾರಿ ಇವರು ಷರತ್ತುಗಳನುಸಾರ ಡಿ.ಡಿ.ಅಥವಾ ಬ್ಯಾಂಕರ್ ಚೆಕ್‌ಗಳನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿಯವರ ಟೆಂಡರನ್ನು ತಿರಸ್ಕರಿಸಬಹುದಾಗಿದೆ. ಉಳಿದ 4 ಜನ ಟೆಂಡರ್‌ದಾರರು ಸಲ್ಲಿಸಿದ ಧರಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಟೆಂಡರ್‌ದಾರರು ವಿವಿಧ ಐಟಂಗಳಿಗೆ ಕಡಿಮೆ ಧರಗಳನ್ನು ಸಲ್ಲಿಸಿರುತ್ತಾರೆ.

| | |
|---|---|
| 1) ಶ್ರೀ ಕಸ್ತೂರಿ ಗ್ರಾಫಿಕ್ಸ್ , ಬಳ್ಳಾರಿ ಇವರು ಸಲ್ಲಿಸಿದ ಕಡಿಮೆ ಧರಗಳ ಐಟಂ ನಂ.2, 7,8,13,17,18 | = 06 |
| 2) ಸಂಪೂರ್ಣ ಸ್ಕ್ರೀನ್ ಆಪ್‌ಸೆಟ್ ಪ್ರಿಂಟರ್ಸ್, ಬಳ್ಳಾರಿ ಇವರು ಸಲ್ಲಿಸಿದ ಕಡಿಮೆ ಧರಗಳ ಐಟಂ ನಂ.3,6,9,10,11,16,19 | = 07 |
| 3) ಆದರ್ಶ ಪ್ರಿಂಟರ್ಸ್, ಬಳ್ಳಾರಿ ಇವರು ಸಲ್ಲಿಸಿದ ಕಡಿಮೆ ಧರಗಳ ಐಟಂ ನಂ.1,4,5,12,15 | = 05 |
| ಐಟಂ ನಂ.14ಕ್ಕೆ ಕಸ್ತೂರಿ ಗ್ರಾಫಿಕ್ಸ್ ಮತ್ತು ಸಂಪೂರ್ಣ ಸ್ಕ್ರೀನ್ ಆಫ್‌ಸೆಟ್ ಪ್ರಿಂಟರ್ಸ್ ಇವರು ಸಮಾನ ಧರವನ್ನು ಸೂಚಿಸಿರುತ್ತಾರೆ. | = 01 |
| **ಒಟ್ಟು** | = **19** |

ಮೇಲಿನ ಕಡಿಮೆ ಧರಗಳನ್ನು ಸೂಚಿಸಿದ ಮೂರು ಮುದ್ರಣಾದಾರರಿಗೆ ಕಡಿಮೆ ಧರ ಅನುಸಾರ ಮುದ್ರಣ ಆದೇಶ ನೀಡಲು ಹಾಗೂ ಐಟಂ ಸಂಖ್ಯೆ:14ಕ್ಕೆ ಇಬ್ಬರು ಟೆಂಡರುದಾರರು ಸಮಾನ ಧರವನ್ನು ಸೂಚಿಸಿರುವುದರಿಂದ ಮಾನ್ಯ ಮಹಾಪೌರರು ಈ ವಿಷಯವನ್ನು ಸಭೆಯ ಮುಂದೆ ಮಂಡಿಸಲು ಆದೇಶಿಸಿರುವುದರಿಂದ ಸಭೆಯ ಮಂಜೂರಾತಿಗಾಗಿ ಸಭೆಯಲ್ಲಿ ಮಂಡಿಸಿದೆ.

**ಠರಾವು ಸಂಖ್ಯೆ:231:**

ಮಹಾನಗರ ಪಾಲಿಕೆ ಕಛೇರಿಯ ಉಪಯೋಗಕ್ಕಾಗಿ 2009–10ನೇ ಸಾಲಿಗೆ ಅಗತ್ಯವಿರುವ ನಮೂನೆಗಳು, ಪುಸ್ತಕಗಳು, ರಿಜಿಸ್ಟರ್‌ಗಳು ಇತ್ಯಾದಿಗಳನ್ನು ಮುದ್ರಿಸಿ ಸರಬರಾಜು ಮಾಡಲು ಕಛೇರಿ ಟಿಪ್ಪಣಿಯಲ್ಲಿ ಕಾಣಿಸಿದಂತೆ 1) ಶ್ರೀ ಕಸ್ತೂರಿ ಗ್ರಾಫಿಕ್ಸ್,ಬಳ್ಳಾರಿ ಇವರು (6) ಐಟಂಗಳಿಗಾಗಿ, (2) ಸಂಪೂರ್ಣ ಸ್ಕ್ರೀನ್ ಆಫ್‌ಸೆಟ್ ಪ್ರಿಂಟರ್ಸ್,ಬಳ್ಳಾರಿ ಇವರು (7) ಐಟಂಗಳಿಗಾಗಿ ಮತ್ತು (3)ಆದರ್ಶ ಪ್ರಿಂಟರ್ಸ್,ಬಳ್ಳಾರಿ ಇವರು,(5)ಐಟಂಗಳಿಗಾಗಿ ಕಡಿಮೆ ಧರ ಕಾಣಿಸಿದ ಟೆಂಡರುಗಳನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ಮತ್ತು ಐಟಂ ನಂ.14ಕ್ಕೆ ಕಸ್ತೂರಿ ಗ್ರಾಫಿಕ್ಸ್ ಹಾಗೂ ಸಂಪೂರ್ಣ ಸ್ಕ್ರೀನ್ ಆಫ್ ಸೆಟ್ ಪ್ರಿಂಟರ್ಸ್ ಇವರು ಸಮಾನ ಧರ ಸೂಚಿಸಿರುವುದರಿಂದ ಈ ಐಟಂನ ಮುದ್ರಣಕ್ಕಾಗಿ ಇಬ್ಬರಿಗೂ ಅರ್ಧದ ಹಂಚಿಕೆ ಮಾಡಿ ಪೂರೈಕೆ ಆದೇಶ ನೀಡಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

…17

**ವಿಷಯ ಸಂಖ್ಯೆ:232:**

ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ ಅಭಿಲೇಖಾಲಯ ವಿಭಾಗಕ್ಕೆ ಸಂಬಂಧಪಟ್ಟಂತೆ, ಕಛೇರಿ ಉಪಯೋಗಕ್ಕಾಗಿ ದಿನನಿತ್ಯ ಬಳಸುವ ಪೇಪರ್, ಸ್ಟೇಷನರಿ ಇತ್ಯಾದಿಗಳನ್ನು ಖರೀದಿಸಲು 2009-10 ನೇ ಸಾಲಿಗಾಗಿ ಅಗತ್ಯ ಸಾಮಗ್ರಿಗಳನ್ನು ಮಾನ್ಯ ಮಹಾಪೌರರ ಆದೇಶದ ಮೇರೆಗೆ ಖರೀದಿಸಲು ದಿನಾಂಕ:02.07.2008 ರಂದು ಟೆಂಡರ್‌ನ್ನು ಕರೆಯಲಾಗಿದ್ದು, ಸದರಿ ಟೆಂಡರ್‌ಗೆ ಪ್ರತಿಕ್ರಿಯೆವಾಗಿ ಈ ಕೆಳಕಂಡ ಟೆಂಡರ್‌ದಾರರು ತಮ್ಮ ಧರಪಟ್ಟಿಗಳನ್ನು ಟೆಂಡರ್ ಅಂತಿಮ ದಿನಾಂಕ:03.08.2009 ರೊಳಗಾಗಿ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ.

1) ಅಶೋಕ್ ಪೇಪರ್ ಮಾರ್ಟ್, ಬಳ್ಳಾರಿ
2) ಮಹಾಲಕ್ಷ್ಮೀ ಪೇಪರ್ ಮಾರ್ಟ್, ಬಳ್ಳಾರಿ
3) ಆದರ್ಶ ಪ್ರಿಂಟರ್ಸ್, ಬಳ್ಳಾರಿ
4) ಟೆಕ್ನೋ ಬುಕ್ ಸೆಂಟರ್ ಬಳ್ಳಾರಿ

ಮೇಲಿನ (4) ಟೆಂಡರ್‌ದಾರರ ಪೈಕಿ ಒಟ್ಟು 52 ಐಟಂಗಳಿಗೆ ಶ್ರೀ ಅಶೋಕ್ ಪೇಪರ್ ಮಾರ್ಟ್, ಬಳ್ಳಾರಿ ಇವರು ಉಳಿದ ಮೂರು ಜನ ಟೆಂಡರ್‌ದಾರರಿಗಿಂತ ಕಡಿಮೆ ಧರ ಸೂಚಿಸಿರುತ್ತಾರೆ.

ಸದರಿ ಧರಗಳನ್ನು ಮಾನ್ಯ ಮಹಾಪೌರರು, ಸಾಮಾನ್ಯ ಸಭೆ ಮಂಜೂರಾತಿ ನಿರೀಕ್ಷಣೆ ಮೇರೆಗೆ ಒಪ್ಪಿ ಮಂಜೂರಿಸಿರುವುದರಿಂದ ಸ್ಟೇಷನರಿ ಸಾಮಗ್ರಿಗಳಿಗಾಗಿ ಬಂದ ಅತಿ ಕಡಿಮೆ ಟೆಂಡರ್ ಸೂಚಿಸಿದ ಶ್ರೀ ಅಶೋಕ್ ಪೇಪರ್ ಮಾರ್ಟ್, ಬಳ್ಳಾರಿ ಇವರ ಧರಗಳನ್ನು ಒಪ್ಪಿ ಮಂಜೂರು ಮಾಡಲು ಸಭೆಯಲ್ಲಿ ಮಂಡಿಸಿದೆ.

**ಠರಾವು ಸಂಖ್ಯೆ:232:**

ಮಹಾನಗರಪಾಲಿಕೆಯ ಕಛೇರಿಯ ಉಪಯೋಗಕ್ಕಾಗಿ 2009-10ನೇ ಸಾಲಿಗೆ ಅಗತ್ಯವಿರುವ ಲೇಖನಾ ಸಾಮಗ್ರಿಗಳ ಸರಬರಾಜುಗಾಗಿ ಒಟ್ಟು 52 ಐಟಂಗಳಿಗೂ ಕಡಿಮೆ ಧರ ಕಾಣಿಸಿದ ಶ್ರೀ ಅಶೋಕ ಪೇಪರ್ ಮಾರ್ಟ್ , ಬಳ್ಳಾರಿ ಇವರ ಟೆಂಡರನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ ಸಂಖ್ಯೆ:233:**

ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ಮಹಾನಗರಪಾಲಿಕೆಯ ವಿವಿಧ ಪ್ರದೇಶಗಳಲ್ಲಿರುವ ಖಾಲಿ ಇರುವ 24 ವಾಣಿಜ್ಯ ಮಳಿಗೆಗಳನ್ನು ದಿನಾಂಕ :10.07.2009 ರಂದು ಬಹಿರಂಗ ಹರಾಜು ಮೂಲಕ ಬಾಡಿಗೆಗೆ (ಲೀಜ್ ಶುಲ್ಕ) ವಸೂಲಾತಿಗಾಗಿ ಹರಾಜು ಹಾಕಲಾಗಿದು, ಸದರಿ ಹರಾಜಿನಲ್ಲಿ ಮುಂಗಡ ಠೇವಣಿ ರೂ.10000/- ಪ್ರತಿ ಮಳಿಗೆಗೆ ಪಾವತಿಸಿ ಅತೀ ಹೆಚ್ಚಿನ ಬಿಡ್ ಕೂಗಿದವರ ವಿವರಗಳು ಮಳಿಗೆವಾರು ಈ ಕೆಳಗಿನಂತಿದೆ.

| ಕ್ರ. ಸಂ | ಮಳಿಗೆ ಸಂಖ್ಯೆ | ಪ್ರದೇಶ | ಲೀಜ್ ಪಡೆದವರ ಹೆಸರು | ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಸವಾಲ್ ಕೂಗಿದ ಮೊತ್ತ ರೂ. |
|---|---|---|---|---|
| 1 | 01 | ನಟರಾಜ್ ಚಿತ್ರಮಂದಿರ ಎದುರಿಗೆ ಮೊದಲ ಅಂತಸ್ತಿನಲ್ಲಿರುವ ಮಳಿಗೆಗಳಿಗೆ | ಮಡಿವಾಲಪ್ಪ ತಂದೆ ಸದಾಶಿವಪ್ಪ | 2400.00 |
| 2 | 02 | ಅದೆ | ಪಿ.ರಾಮಾಂಜಿನೇಯಲು ತಂದೆ ರಾಮಯ್ಯ | 2450.00 |
| 3 | 04 | ಅದೆ | ಮುನಿಸ್ವಾಮಿ ತಂದೆ ಲಿಂಗಪ್ಪ | 2600.00 |

| | | | | |
|---|---|---|---|---|
| 4 | 05 | ಅದೆ | ಸಿ.ಹೆಚ್.ಶ್ರೀನಿವಾಸ ರಾವ್ ತಂದೆ ಶಿವರಾವ್ | 2450.00 |
| 5 | 06 | ಅದೆ | ವಿಜಯಕುಮಾರ್ ತಂದೆ ಪಂಪಣ್ಣ | 2400.00 |
| 6 | 07 | ಅದೆ | ಪಿ.ಚೆನ್ನಕೇಶವಲು ತಂದೆ ರಾಘವಯ್ಯ | 2700.00 |
| 7 | 08 | ಅದೆ | ಪಿ.ಚೆನ್ನಕೇಶವಲು ತಂದೆ ರಾಘವಯ್ಯ | 3050.00 |
| 8. | 01 | ಸಿರುಗುಪ್ಪ ರಸ್ತೆ ಆಕ್ಟ್ರಾಯ್ ಗೋಡೌನ್ ಮಳಿಗೆಗಳು | ಮುತ್ತಣ್ಣ ತಂದೆ ಸಣ್ಣ ಹನುಮಂತಪ್ಪ | 2100.00 |
| 9. | 03 | ಅದೆ | ಹೆಚ್.ಎಂ.ಮಂಜುನಾಥ್ | 2150.00 |
| 10 | 04 | ಅದೆ | ಸಿ.ಎಂ.ಹಿರೇಮಠ್ | 2200.00 |
| 11 | 01 | ಕೆ.ಸಿ.ರಸ್ತೆ ಮಳಿಗೆಗಳು | ಡಿ.ಪ್ರಭಾಕರ್ | 2100.00 |
| 12 | 02 | ಅದೆ | ರಾಹುಲ್ ದುಗ್ಗಿ | 2150.00 |
| 13 | 03 | ಅದೆ | ಕೆ.ರಾಮಾಂಜಿನೇಯಲು | 2150.00 |
| 14 | 04 | ಅದೆ | ಅಶೋಕ್ ಎಂ.ಟಿ | 2150.00 |
| 15 | 05 | ಅದೆ | ಪಿ.ಮಲ್ಲಿಕಾರ್ಜುನ ರೆಡ್ಡಿ | 2150.00 |
| 16 | 06 | ಅದೆ | ಪಿ.ವಿಶಾಲ | 2150.00 |
| 17 | 05 | ಗಾಂಧಿನಗರ ವಾಣಿಜ್ಯ ಮಳಿಗೆಗಳು | ಶ್ರೀನಿವಾಸ ರೆಡ್ಡಿ | 1650.00 |
| 18 | 10 | ಅದೆ | ಎಸ್.ಎಲ್.ಮಹೇಶ್ ಗೌಡ | 1600.00 |
| 19 | 12 | ಅದೆ | ಎಂ.ಶ್ರೀನಿವಾಸುಲು | 1600.00 |
| 20 | 13 | ಅದೆ | ಕವಿತಾ | 1600.00 |
| 21 | 17 | ಅದೆ | ಜಿ.ಚಂದ್ರಶೇಖರ್ | 1650.00 |
| 22 | 19 | ಅದೆ | ಶ್ರೀನಿವಾಸ್ | 1600.00 |
| 23 | 12 | ಎಸ್.ಬಿ.ಎಂ ಎದುರುಗೆ ಮಳಿಗೆಗಳು | ಹರಾಜು ಆಗಿರುವುದಿಲ್ಲ | – |
| 24 | 16 | ಅದೆ | ಜಿ.ಮಹೇಶ್ | 2200.00 |

ಈ ಮೇಲೆ ವಿವರಿಸಿದಂತೆ ಅತೀ ಹೆಚ್ಚಿನ ಬಿಡ್ ಕೂಗಿದವರ ಬಿಡ್ ಬಾಡಿಗೆ ಮೊತ್ತವನ್ನು ಅನುಮೋದಿಸಲು ಸಾಮಾನ್ಯ ಸಭೆ ಮುಂದೆ ಮಂಡಿಸಿದೆ.

**<u>ಠರಾವು ಸಂಖ್ಯೆ:233:</u>**

ಮಹಾನಗರಪಾಲಿಕೆಯ ವಿವಿಧ ಪ್ರದೇಶಗಳಲ್ಲಿರುವ ಸದ್ರಿ 23 ಮಳಿಗೆಗಳಿಗೆ 4 ವರ್ಷ 11 ತಿಂಗಳ ಲೀಜ್‌ಗಾಗಿ ಮಾಹೆಯಾನ ಪರವಾನಿಗೆ ಶುಲ್ಕ ಆಧಾರದ ಮೇಲೆ ಲೀಜ್ ಪಡೆಯಲು ಕಛೇರಿ ಟಿಪ್ಪಣಿಯಲ್ಲಿ ಕಾಣಿಸಿದ ಪ್ರಕಾರ ಹೆಚ್ಚಿನ ಸವಾಲು ಮಾಡಿದ ಆಯಾ ಸವಾಲ್‌ದಾರರ ಸವಾಲಿನ ಮಾಸಿಕ ಪರವಾನಿಗೆ ಶುಲ್ಕಗಳನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ ಸಂಖ್ಯೆ:234:**

ಇತ್ತೀಚಿಗೆ ಜರುಗಿದ ಲೋಕಸಭೆ ಚುನಾವಣೆ ಬಳಕೆಗಾಗಿ ಅಗತ್ಯವಿರು ಲೇಕನಾ ಸಾಮಾಗ್ರಿಗಳನ್ನು ತುರ್ತಾಗಿ ಪೂರೈಸಲು ಈಗಾಗಲೇ 2008–09ನೇ ಸಾಲಿಗೆ ಅನುಮೋದಿಸಿದ ಟೆಂಡರ್ ಧರದ ಪ್ರಕಾರ ಯಶಸ್ವಿ ಟೆಂಡರ್‌ದಾರರಾದ ಶ್ರೀ ಅಶೋಕ ಪೇಪರ್ ಮಾರ್ಟ್, ಬಳ್ಳಾರಿ ಇವರಿಂದ ಸರಕು ಪೂರೈಸಿಕೊಂಡು ಬಿಲ್ ನಂ.4395,4396, ದಿನಾಂಕ:25.11.2008ರ ಪ್ರಕಾರ ರೂ.59,613.50 ಗಳನ್ನು ಪಾವತಿಸಿದ ಕ್ರಮಕ್ಕೆ ಅನುಮೋಧಿಸಲು ಸಭೆಗೆ ಮಂಡಿಸಿದೆ.

**ಠರಾವು ಸಂಖ್ಯೆ:234:**

ಈ ಬಾಬತ್ತು ರೂ.59,613.50 ಗಳನ್ನು ಶ್ರೀ ಅಶೋಕ ಪೇಪರ್ ಮಾರ್ಟ್ ಬಳ್ಳಾರಿ ಇವರಿಗೆ ಪಾವತಿಸಿದ ಕ್ರಮಕ್ಕೆ ಸಭೆ ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು.

**ವಿಷಯ ಸಂಖ್ಯೆ:235:**

ಈ ಮಹಾನಗರಪಾಲಿಕೆಯ ಮಹಾಪೌರರು ಚುನಾವಣೆಯು 28.02.2009 ರಂದು ಜರುಗಿ ಶ್ರೀ ಕೆ.ಬಸವರಾಜ್ ಇವರು ಮಹಾಪೌರರಾಗಿ ಆಯ್ಕೆ ಆಗಿದ್ದು ಇವರು ಪಾಲಿಕೆಯ ಸಭೆಗಳಿಗೆ ಮತ್ತು ಸಮಾರಂಭ ಇತ್ಯಾದಿಗಳಲ್ಲಿ ಭರಿಸುವಂತಹ ಮಹಾಪೌರರ ಗೌನ್ ತಯಾರಿಸಿ ಸರಬರಾಜು ಮಾಡಲು ಬಂದ ಕೊಟೇಶನ್‌ಗಳ ಪೈಕಿ ಸೋನಿ ಟ್ರಿಮ್ ಲೈನ್ಸ್, ಬೆಂಗಳೂರು ಇವರು (2) ಗೌನ್‌ಗಳಿಗಾಗಿ ರೂ.22,500/– ಕಡಿಮೆ ಧರ ಸೂಚಿಸಿದ್ದನ್ನು ಸಭೆಯ ಮಂಜೂರಾತಿ ನಿರೀಕ್ಷಣಾ ಮೇರೆಗೆ ಅಂಗೀಕರಿಸಿ ಒಟ್ಟು ಬಿಲ್ ಹಣ ರೂ.22,500/–ಗಳನ್ನು ಪಾವತಿಸಿ ಗೌನ್ ಪೂರೈಸಿಕೊಂಡ ಕಛೇರಿ ಕ್ರಮಕ್ಕೆ ಅನುಮೋಧಿಸಲು ಸಭೆಗೆ ಮಂಡಿಸಿದೆ.

**ಠರಾವು ಸಂಖ್ಯೆ:235:**

ಮಹಾನಗರಪಾಲಿಕೆಯ ಮಹಾಪೌರರು ಸಭೆಗಳಲ್ಲಿ ಮತ್ತು ಸಮಾರಂಭಗಳಲ್ಲಿ ಧರಿಸುವಂತಹ ಮಹಾಪೌರರ (2) ಗೌನ್‌ಗಳನ್ನು ತಯಾರಿಸಿ ಸರಬರಾಜು ಮಾಡಲು ಕಡಿಮೆ ಧರ ಕಾಣಿಸಿದ ಸೋನಿ ಟ್ರೀಮ್ ಲೈನ್ಸ್, ಬೆಂಗಳೂರು ಇವರ ಕಡಿಮೆ ಧರದ ಕೊಟೇಷನ್ ಅಂಗೀಕರಿಸಿ, ಬಿಲ್ ಹಣ ರೂ.22,500/–ಗಳನ್ನು ಪಾವತಿಸಿ ಗೌನ್‌ಗಳನ್ನು ಪೂರೈಸಿಕೊಂಡ ಕ್ರಮಕ್ಕೆ ಸಭೆ ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು.

**ವಿಷಯ ಸಂಖ್ಯೆ:236:**

ಕಛೇರಿಯ ಕಂದಾಯ ಶಾಖೆ ಉಪಯೋಗಕ್ಕಾಗಿ ಹಕ್ಕು ವರ್ಗಾವಣೆ ಆದೇಶ (2) ನೊಂದಣಿ ಆದೇಶ (3) ನಮೂನೆ ಇತ್ಯಾಧಿಗಳನ್ನು ಮುದ್ರಿಸಿ ಪೂರೈಸಲು ಕಸ್ತೂರ ಗ್ರಾಫಿಕ್ಸ್, ಬಳ್ಳಾರಿ ಇವರು ಕಾಣಿಸಿದ ಕಡಿಮೆ ಧರ ಕೊಟೇಶನ್‌ನ್ನು ಅಂಗೀಕರಿಸಿ ಸದರಿ ಅವರಿಂದ ಸರಕು ಪೂರೈಸಿಕೊಂಡು ಬಿಲ್ ನಂ.132, ದಿನಾಂಕ:30.10.2008 ರ ಪ್ರಕಾರ ಒಟ್ಟು ಹಣ ರೂ.95,000/– ಗಳನ್ನು ಶ್ರೀ ಕಸ್ತೂರಿ ಗ್ರಾಫಿಕ್ಸ್ ಬಳ್ಳಾರಿ ಇವರಿಗೆ ಪಾವತಿಸಿದ ಕ್ರಮಕ್ಕೆ ಅನುಮೋದಿಸಲು ಸಭೆಗೆ ಮಂಡಿಸಿದೆ.

**ಠರಾವು ಸಂಖ್ಯೆ:236:**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಹಕ್ಕು ವರ್ಗಾವಣೆ ಆದೇಶ, ನೊಂದಣಿ ಆದೇಶ, ನಮೂನೆ ಇತ್ಯಾದಿಗಳನ್ನು ಮುದ್ರಿಸಿ ಪೂರೈಸಲು ಕಡಿಮೆ ಧರದ ಕೊಟೇಷನ್ ಅಂಗೀಕರಿಸಿ, ಸರಕು ಪೂರೈಸಿಕೊಂಡ ಬಾಬತ್ತು ರೂ.95,000/– ಗಳನ್ನು ಶ್ರೀ ಕಸ್ತೂರಿ ಗ್ರಾಫಿಕ್ಸ್, ಬಳ್ಳಾರಿ ಇವರಿಗೆ ಪಾವತಿಸಿದ ಕ್ರಮಕ್ಕೆ ಸಭೆ ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು.

…20

**ವಿಷಯ ಸಂಖ್ಯೆ:237:**

2009–10 ನೇ ಸಾಲಿನಲ್ಲಿ ಬಳ್ಳಾರಿ ಮಹಾನಗರಪಾಲಿಕೆ ವತಿಯಿಂದ ಈ ಕೆಳಗಿನ ಬಡಾವಣೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ನೀರು ಸರಬರಾಜು ನಿರ್ವಹಣೆಗಾಗಿ ಪೈಪ್‌ಲೈನ್ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ' ಈ ಕೆಳಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಧರದ ಪಟ್ಟಿಯಂತೆ ತಯಾರಿಸಲಾಗಿ, ಪ್ರಯುಕ್ತ ಸದರಿ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲು ಸಭೆಗೆ ಮಂಡಿಸಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ವೆಚ್ಚ |
|---|---|---|
| 1 | ಬಳ್ಳಾರಿ ನಗರದ 30ನೇ ವಾರ್ಡ್‌ನ ತಿಲಕ್ ನಗರ ಬಡಾವಣೆಯಲ್ಲಿ 90 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 130000 |
| 2 | ಬಳ್ಳಾರಿ ನಗರದ 26ನೇ ವಾರ್ಡಿನ ಆದೋನಿಗೇರಿ ಪ್ರದೇಶದಲ್ಲಿ 90 ಎಂ.ಎಂ. ವ್ಯಾಸದ ಪಿ.ವಿ.ಸಿ ಪೈಪ್ ಲೈನ್ ಹಾಕುವ ಕಾಮಗಾರಿ | 130000 |
| 3 | ಬಳ್ಳಾರಿ ನಗರದ 27ನೇ ವಾರ್ಡಿನ ಜಾಗೃತಿ ನಗರ ಪ್ರದೇಶದಲ್ಲಿ 160 ಎಂ.ಎಂ. ಮತ್ತು 90 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 456000 |
| 4 | ಬಳ್ಳಾರಿ 23ನೇ ವಾರ್ಡಿನ ರೇಡಿಯೋ ಪಾರ್ಕ್ ಹತ್ತಿರ ಸುದರ್ಶನ ನಾಯ್ಡು ಬೀದಿಯಲ್ಲಿ 90 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 40000 |
| 5 | ಬಳ್ಳಾರಿ ನಗರದ 28ನೇ ವಾರ್ಡಿನ ಬಂಡಿಹಟ್ಟಿ ಪ್ರದೇಶದಲ್ಲಿ ಮುಖ್ಯ ರಸ್ತೆಯಿಂದ ಮಸೀದಿ ಮತ್ತು ಇಡಿಗಿರಿಯಿಂದ ಮಾರೆಮ್ಮಗುಡಿ ಪ್ರದೇಶದವರೆಗೆ 90 ಎಂ.ಎಂ. ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 110000 |
| 6 | ಬಳ್ಳಾರಿ ನಗರದ 29ನೇ ವಾರ್ಡ್ ರಾಮಾಂಜಿನೇಯ ನಗರದಲ್ಲಿ ಹೊಸದಾಗಿ 160 ಎಂ.ಎಂ. ಮತ್ತು 110 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 552000 |
| 7 | ಬಳ್ಳಾರಿ ನಗರದ 26ನೇ ವಾರ್ಡ್ ಐಸ್ಕ್ರೀಮ್ ಫ್ಯಾಕ್ಟರಿಯಿಂದ ನಲ್ಲಚೆರವು ಇಟ್ಟಿಗೆ ಬಟ್ಟಿಯವರೆಗೆ ಹೊಸಾಗಿ 110 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 207000 |
| 8 | ಬಳ್ಳಾರಿ ನಗರದ 26ನೇ ವಾರ್ಡ್ ಬೈಪಾಸ್ ರೋಡ್‌ನಲ್ಲಿರುವ ಓವರ್ ಹೆಡ್ ಟ್ಯಾಂಕ್ (OHT) ನಿಂದ ಇಟ್ಟಿಗಿ ಬಟ್ಟಿಯವರೆಗೆ ವಯಾ ಕೊರಚಗೇರಿ ಮತ್ತು ಜಾಗೃತಿ ನಗರ ಮಸೀದಿಯಿಂದ ಸಿ.ಬಿ ಮುಖ್ಯರಸ್ತೆಯವರೆಗೆ ಹೊಸದಾಗಿ 110 ಎಂ.ಎಂ ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 55000 |
| 9 | ಬಳ್ಳಾರಿ ನಗರದ 20ನೇ ವಾರ್ಡ್ ನೀರು ಸರಬರಾಜು ನಿರ್ವಹಣೆಗಾಗಿ ಸಂಗನಕಲ್ ಮುಖ್ಯರಸ್ತೆಯಿಂದ ಅಲ್ಲಂ ಲೇಔಟ್ ವರೆಗೆ 110 ಎಂ.ಎಂ. ಮತ್ತು 90 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 130000 |
| 10 | ಬಳ್ಳಾರಿನಗರದ 33ನೇ ವಾರ್ಡ್ ಶಿವಲಿಂಗನಗರ ಬಡಾವಣೆಯ (ಸತ್ಯವಂತ ಮನೆ ಹತ್ತಿರ) 110 ಎಂ.ಎಂ. ವ್ಯಾಸದ ಹೊಸ ಪಿವಿಸಿ ಪೈಪ್ ಲೈನ್ ಹಾಕುವ ಕಾಮಗಾರಿ | 76000 |
| 11 | ಬಳ್ಳಾರಿ ನಗರದ ಮುಖ್ಯರಸ್ತೆಯಲ್ಲಿ ಏರ್‌ವಾಲ್ವ್ ಮತ್ತು ಸ್ಲಿವ್ಸ್ ವಾಲ್ವ್ ಮತ್ತು ಪಿವಿಸಿ ಪೈಪ್ ಲೈನ್ ಹಾಗೂ ಎಂ.ಎಸ್.ಡಮ್ಮಿ ಪ್ಲೇಟ್ ಗಳನ್ನು ಅಳವಡಿಸುವ ಕಾಮಗಾರಿ | 66000 |
| 12 | ಬಳ್ಳಾರಿ ನಗರದ 1)ಸುಧಾಕ್ರಾಸ್ ರೋಡ್ ಎನ್.ಸಿ.ಸಿ. ಆಫೀಸ್ ಹತ್ತಿರ 2) ಸೆಂಟ್ ಫಿಲೋಮಿನಾ ಶಾಲೆ ಕೆನರಾ ಬ್ಯಾಂಕ್ ಎದುರುಗಡೆ 500 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್‌ಗೆ ಎಂ.ಎಸ್ ಕ್ಲಾಂಪ್‌ಗಳನ್ನು ಸರಬರಾಜು ಮಾಡಿ ಜೋಡಣೆ ಮಾಡುವುದು | 34000 |

**ಠರಾವು ಸಂಖ್ಯೆ:237:**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಕಾಮಗಾರಿ ಕ್ರಮ ಸಂಖ್ಯೆ 1 ರಿಂದ 12ರವರೆಗಿನ ಆಯಾ ಕಾಮಗಾರಿಗಳ ಮುಂದೆ ಕಾಣಿಸಿದ ಆಯಾ ಅಂದಾಜು ವೆಚ್ಚಗಳಿಗೆ ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿತು.

**ವಿಷಯ ಸಂಖ್ಯೆ:238:**

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ/16/ಎಸ್.ಎಫ್.ಸಿ/2009, ದಿನಾಂಕ: 06.07.2009 ನೇದ್ದರಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯ ಸರಹದ್ದಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು 1490.99 ಲಕ್ಷಗಳು ಮುಕ್ತನಿದಿ ಅನುದಾನವನ್ನು 2009–10 ಸಾಲಿನ ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆ., ಹಾಗೂ ಎಸ್.ಎಫ್.ಸಿ ಮುಕ್ತನಿಧಿ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಸುತ್ತೋಲೆ ಸಂ:ನಅಇ/37/ಎಸ್.ಎಫ್.ಸಿ/2008, ದಿನಾಂಕ:06.07.2009 ನೇದ್ದರಲ್ಲಿ ಮಾರ್ಗ ಸೂಚಿಗಳಿಗೆ ಕೆಲವೊಂದು ಬದಲಾವಣೆ ಮಾಡಿ ಈ ಕೆಳಗಿನಂತೆ ಮಾರ್ಗ ಸೂಚಿಗಳನ್ನು ಕಟ್ಟು ನಿಟ್ಟಾಗಿ ಅನುಷ್ಠಾನಗೊಳಿಸುವಂತೆ ಸೂಚಿಸಲಾಗಿದೆ.

## ಮುಕ್ತನಿಧಿ ಅನುದಾನದ ಬಳಿಕೆಗೆ ಸೂತ್ರಗಳು

ಅ) 2008–09 ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿರುವ ಹಾಗೂ 2009–10 ರ ಸಾಲಿಗೆ ಮುಂದುವರೆದಿರುವ ಕಾಮಗಾರಿಗಳನ್ನು (Spillover works) ಪೂರ್ಣಗೊಳಿಸಲು ಅವಶ್ಯವಿರುವ ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳು 2009–10 ರ ಸಾಲಿಗೆ ನಿಗಧಿಯಾಗಿರುವ ಒಟ್ಟು ಅನುದಾನದಲ್ಲಿ ಕಡ್ಡಾಯವಾಗಿ ಮೀಸಲಿಡತಕ್ಕದ್ದು.

ಆ) ಮುಂದುವರೆದ ಕಾಮಗಾರಿಗಳಿಗೆ ಮೀಸಲಿಟ್ಟ ಅನುದಾನದ ನಂತರ ಉಳಿಯುವ ಅನುದಾನದಲ್ಲಿ ಸರ್ಕಾರದ ಸುತ್ತೋಲೆ ಸಂ:ನಅಇ/186/ಜಿಇಎಲ್/2008, ದಿನಾಂಕ: 04.03.2009 ರನ್ವಯ ಶೇ 22.75 ರಷ್ಟು ಅನುದಾನವನ್ನು ಪ.ಜಾ/ಪ.ಪಂಗಡ ವರ್ಗದವರಿಗಾಗಿ ಮೀಸಲಿರಿಸುವುದು.

1) ಕುಡಿಯುವ ನೀರಿನ ಯೋಜನೆಗೆ ಅದರಲ್ಲೂ ಅಭಾವ ಪರಿಸ್ಥಿತಿ ನಿಭಾಯಿಸುವ ಯೋಜನೆಗಳಿಗೆ ಅಧ್ಯತೆಯ ಮೇಲೆ ಅವಕಾಶ ಕಲ್ಪಿಸುವುದು.
2) ತರಕಾರಿ ಮಾರುಕಟ್ಟೆ, ಮಾಂಸ, ಕೋಳಿ ಹಾಗೂ ಮೀನು ಮಾರುಕಟ್ಟೆ ಮತ್ತು ಸಣ್ಣ ಪ್ರಮಾಣದ ಮಾರುಕಟ್ಟೆ (Mini Markets) ನಿರ್ಮಾಣ.
3) ನಿರ್ಮಲ ನಗರ ಅನುಮೋದಿತ ಮಾದರಿಯಂತೆ ಸುಸಜ್ಜಿತ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡುವುದು.
4) ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕೆ ಸ್ಥಳೀಯ ಸಂಸ್ಥೆಗೆ ಸೇರಿರುವ ಜಾಗ ಲಭ್ಯವಿಲ್ಲದ ಪ್ರಕರಣಗಳಲ್ಲಿ ಮಾತ್ರ ನಿಯಮನುಸಾರ ಜಮೀನಿನ ಖರೀದಿಗೆ ಅವಕಾಶ ಕಲ್ಪಿಸುವುದು.
5) ಸ್ಮಶಾನ ಅಭಿವೃದ್ಧಿ.
6) ಆಂತರಿಕ ರಸ್ತೆಗಳ ಮತ್ತು ಚರಂಡಿಗಳ ನಿರ್ಮಾಣ, (ಮಣ್ಣಿನ ರಸ್ತೆ ಹಾಗೂ ಕಲ್ಲು ಕಟ್ಟಡದ ಚರಂಡಿಗಳ ನಿರ್ಮಾಣಕ್ಕೆ ಅವಕಾಶವಿಲ್ಲ) ಧೀರ್ಘಕಾಲ ಬಾಳಿಕೆ ಬರುವ ಸಿಮೆಂಟ್ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಒತ್ತು ನೀಡುವುದು.
7) ಸ್ಥಳೀಯ ಸಂಸ್ಥೆಗಳು ಯಾವುದಾದರು ಸಾಲವನ್ನು ಹೊಂದಿದ್ದಲ್ಲಿ ಅದರ ಮರುಪಾವತಿಗೆ ಅವಕಾಶ ಕಲ್ಪಿಸತಕ್ಕದ್ದು.

(ಈ ಮೇಲ್ಕಂಡ ಯೋಜನೆಗಳು ಪೌರಸಂಸ್ಥೆಗಳಲ್ಲಿ ಪರಿಪೂರ್ಣವಾಗಿ ಇದ್ದಾಗ ಮಾತ್ರ ಜಿಲ್ಲಾಧಿಕಾರಿಗಳ ಪೂರ್ವ ಅನುಮತಿ ಪಡೆದು ಬೇರೆ ಯೋಜನೆಗಳಿಗೆ ಅನುದಾನವನ್ನು ವರ್ಗಾಯಿಸಿಕೊಳ್ಳಬಹುದು).

ಇ) ಉಳಿಕೆ ಅನುದಾನದಲ್ಲಿ ಶೇಕಡ 50 ರಷ್ಟನ್ನು (ಒಟ್ಟು ಅನುದಾನದ ಶೇಕಡ 41) ಈ ಕೆಳಕಂಡ ಕಾಮಗಾರಿಗಳನ್ನು /ಕೆಲಸಗಳನ್ನು ಕೈಗೊಳ್ಳುವುದು.

…22

i) ಘನ ತ್ಯಾಜ್ಯ ಸಂಸ್ಕರಣೆಯ ನಿಟ್ಟಿನಲ್ಲಿ ವರ್ಮಿಕಾಂಪೋಸ್ಟ್ ಘಟಕಗಳ ನಿರ್ಮಾಣ ಹಾಗೂ ಘನ ತ್ಯಾಜ್ಯ ವಸ್ತು ವಿಲೇವಾರಿಗಾಗಿ ವೈಜ್ಞಾನಿಕ ನೆಲಭರ್ತಿ ಸೌಲಭ್ಯ ನಿರ್ಮಾಣ ಮತ್ತು ಇತರೆ ನವೀನ ಪದ್ದತಿಗಳ ಅಳವಡಿಕೆಗೆ ಅವಕಾಶ ಕಲ್ಪಿಸುವುದು.

ii) ಯು.ಐ.ಡಿ.ಎಸ್.ಎಂ.ಟಿ.ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಯೋಜನಾ ವೆಚ್ಚದ ಶೇಕಡ 10 ರಷ್ಟನ್ನು ಸ್ಥಳೀಯ ಸಂಸ್ಥೆಯ ವಂತಿಕೆಯಾಗಿ ಪ್ರತ್ಯೇಕವಾದ ಖಾತೆಗೆ ಜಮೆ ಮಾಡತಕ್ಕದ್ದು.

iii) ಘನ ತ್ಯಾಜ್ಯ ವಿಲೇವಾರಿಗಾಗಿ ಲ್ಯಾಂಡ್‌ಫಿಲ್ ಸೈಟ್ ಅಭಿವೃದ್ದಿ ಕಾಮಗಾರಿ ಹಾಗೂ ಯಂತ್ರೋಪಕರಣಗಳ ಖರೀದಿಗೆ 12ನೇ ಹಣಕಾಸು ಯೋಜನೆಯ ನಿಗದಿತ ಅನುದಾನದಲ್ಲಿ ಇರುವ ಕೊರತೆಯನ್ನು ನೀಗಿಸಲು ಅವಕಾಶ ಕಲ್ಪಿಸುವುದು.

iv) ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಸೌಲಭ್ಯಗಳಿಲ್ಲದ ಸ್ಥಳೀಯ ಸಂಸ್ಥೆಗಳು ಅದನ್ನು ಕಡ್ಡಾಯವಾಗಿ ಅಳವಡಿಸಿ ಕೊಳ್ಳಲು ಕ್ರಮ ಕೈಗೊಳ್ಳುವುದು.

v) ಇತರೆ ಬಾಬ್ತು/ ಯೋಜನೆಗಳಲ್ಲಿ ಇರುವ ಕೊರತೆಯನ್ನು (Short fall/ viability gap funding) ಸರಿದೂಗಿಸಲು ಉಪಯೋಗಿಸತಕ್ಕದ್ದು.

vi) ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದು.

ಮೇಲ್ಕಾಣಿಸಿದ ಸರ್ಕಾರದ ಸುತ್ತೋಲೆಯ ಮಾರ್ಗ ಸೂಚಿಗಳ ಅನ್ವಯ 2009-10 ನೇ ಸಾಲಿನ ಮುಕ್ತನಿಧಿಯ ಕ್ರಿಯಾ ಯೋಜನೆ ಈ ಕೆಳಗಿನಂತಿದೆ.

ಮುಂದುವರೆದ ಕಾಮಗಾರಿಗಳಿಗೆ ಮೀಸಲಿಟ್ಟ ಅನುದಾನದ ನಂತರ ಉಳಿಯುವ ಅನುದಾನದಲ್ಲಿ ಶೇ 22.75ರ ಅನುದಾನ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದವರಿಗೆ ಮೀಸಲಿರಿಸುವುದು. ಬಿಡುಗಡೆಯಾದ ಮುಕ್ತನಿಧಿ ಮೊತ್ತ ರೂ.1490.99-529.06=961.93 ಲಕ್ಷಗಳು.

## ಕ್ರಿಯಾ ಯೋಜನೆ

| | | |
|---|---|---|
| 1. | 2008-09 ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿರುವ ಹಾಗೂ 2009-10 ರ ಸಾಲಿಗೆ ಮುಂದುವರೆದಿರುವ ಕಾಮಗಾರಿಗಳನ್ನು (Spillover works) ಪೂರ್ಣಗೊಳಿಸಲು ಅವಶ್ಯವಿರುವ ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳು 2009-10 ರ ಸಾಲಿಗೆ ನಿಗಧಿಯಾಗಿರುವ ಒಟ್ಟು ಅನುದಾನದಲ್ಲಿ ಕಡ್ಡಾಯವಾಗಿ ಮೀಸಲಿಡತಕ್ಕದ್ದು. (2009-10 ನೇ ಸಾಲಿನಲ್ಲಿ ಈ ಮಹಾನಗರಪಾಲಿಕೆಗೆ ಹಂಚಿಕೆಯಾಗಿರುವ ಹಣ ರೂ.1490.99 ಲಕ್ಷಗಳು ಹಾಗೂ 2008-09 ನೇ ಸಾಲಿನಲ್ಲಿ ಎಸ್.ಎಫ್.ಸಿ ಮುಕ್ತನಿಧಿ ಅನುದಾನದಲ್ಲಿ ಈವರೆಗೂ ಬಿಡುಗಡೆಯಾಗಿರುವ ಅನುದಾನ ರೂ.961.93 ಲಕ್ಷಗಳು) 2008-09 ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿರುವ ಹಾಗೂ 2009-10 ರ ಸಾಲಿಗೆ ಮುಂದುವರೆದಿರುವ ಕಾಮಗಾರಿಗಳನ್ನು (Spillover works) ಪೂರ್ಣಗೊಳಿಸಲು ಅವಶ್ಯವಿರುವ ಅನುದಾನ | ರೂ.529.06ಲಕ್ಷಗಳು |

...23

***ಶೇ 22.75 ರಷ್ಟು ಹಣ ಮೀಸಲಿಡುವುದು ಕಾಯ್ದಿರಿಸಿದ ಹಣ***

ರೂ. 961.93 ಲಕ್ಷಗಳು x 22.75% = ರೂ. 218.84 ಲಕ್ಷಗಳು

***ಶೇ 40 ರಷ್ಟು ಶಿಕ್ಷಣ ಸಂಬಂಧ ಕಾರ್ಯಕ್ರಮಗಳಿಗೆ ಕಾಯ್ದಿರಿಸಿದ ಹಣ***

ರೂ. 218.84 ಲಕ್ಷಗಳು x 40%= ರೂ. 87.54 ಲಕ್ಷಗಳು

***ಶೇ 40 ರಷ್ಟು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕಾಯ್ದಿರಿಸಿದ ಹಣ***

ರೂ. 218.84 ಲಕ್ಷಗಳು x 40%= ರೂ. 87.54 ಲಕ್ಷಗಳು

***ಶೇ 20 ರಷ್ಟು ಇತರ ಕಾರ್ಯಕ್ರಮಗಳಿಗೆ ಕಾಯ್ದಿರಿಸಿದ ಹಣ***

ರೂ. 218.84 ಲಕ್ಷಗಳು x 20%= ರೂ. 43.76 ಲಕ್ಷಗಳು

ಅಂತೂ ಶೇ 22.75ರ ಕಾಯ್ದಿರಿಸಿದ ಮೊತ್ತ ಒಟ್ಟು = ರೂ. 218.84 ಲಕ್ಷಗಳು.

**(ಅ) ಉಳಿಕೆಯ ಅನುದಾನದಲ್ಲಿ ಶೇ 50 ರಷ್ಟು (ಒಟ್ಟು ಅನುದಾನದ ಶೇ 41) ಮೊತ್ತ ರೂ.371.55 ಲಕ್ಷಗಳು ತೆಗೆದು ಕೊಳ್ಳುವ ಕಾಮಗಾರಿಗಳ ವಿವರಣೆ**

| | | |
|---|---|---|
| 1) | 2008–09ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿರುವ ಹಾಗೂ 2009–10ರ ಸಾಲಿಗೆ ಮುಂದುವರೆದಿರುವ ಕಾಮಗಾರಿಗಳನ್ನು (Spillover works) ಪೂರ್ಣಗೊಳಿಸಲು ಅವಶ್ಯವಿರುವ ಟೆಂಡರ್ ಪ್ರಿಮಿಯಂ ಮತ್ತು ಟೆಂಡರ್ ಜಾಹಿರಾತು ಶುಲ್ಕ ಹಾಗೂ ಇತ್ಯಾದಿಗಳನ್ನು ಪಾವತಿಸಲು 2009–10ರ ಸಾಲಿಗೆ ನಿಗಧಿಯಾಗಿರುವ ಒಟ್ಟು ಅನುದಾನದಲ್ಲಿ ಕಡ್ಡಾಯವಾಗಿ ಮೀಸಲಿಡತಕ್ಕದ್ದು. | ರೂ.20.00 ಲಕ್ಷಗಳು |
| 2) | ಬಳ್ಳಾರಿ ನಗರದ ಸುಷ್ಮಾಸ್ವರಾಜ್ ಕಾಲೋನಿ ಮತ್ತು ರಾಘವೇಂದ್ರ ಸ್ವಾಮಿ ಮಠದ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು. | ರೂ.20.00 ಲಕ್ಷಗಳು |
| 3) | ಬಳ್ಳಾರಿ ನಗರದ ವಿವಧ ಬಡಾವಣೆಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಚರಂಡಿಗಳ ನಿರ್ಮಾಣ. | ರೂ.22.00 ಲಕ್ಷಗಳು |
| 4) | ಬಳ್ಳಾರಿ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ:1 ರಿಂದ 15ರ ವರೆಗೆ ತಲಾ ವಾರ್ಡ್‌ಗಳಿಗೆ ರೂ.10.00 ಲಕ್ಷದಂತೆ ಸಿಮೆಂಟ್ ಕ್ರಾಂಕ್ರೀಟ್‌ನ ಆಂತರಿಕ ರಸ್ತೆಗಳು ನಿರ್ಮಿಸುವುದು.<br>15 ವಾರ್ಡ್‌ಗಳು x 10.00 ಲಕ್ಷಗಳು | ರೂ.150.00 ಲಕ್ಷಗಳು |
| 5) | ಬಳ್ಳಾರಿ ನಗರದ ಹರಗಿನಡೋಣಿಯಲ್ಲಿ ಹೊಸದಾಗಿ ನಿರ್ಮಿಸಲಾಗುತ್ತಿರುವ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕಕ್ಕೆ ಕಸವನ್ನು ಸಾಗಿಸಲು ಹೊಸ ಎರಡು ಜೆ.ಸಿ.ಬಿ. ಒಂದು ಟಿಪ್ಪರ್ ಲಾರಿ ಮತ್ತು ನಾಲ್ಕು ಆಟೋ ಟಿಪ್ಪರ್‌ಗಳನ್ನು ಖರೀದಿಸಲು ಕಡ್ಡಾಯವಾಗಿ ಮೀಸಲಿಡತಕ್ಕದ್ದು. | ರೂ.60.00ಲಕ್ಷಗಳು |
| 6) | ಬಳ್ಳಾರಿ ನಗರದ ಅಲ್ಲಿಪುರ ಜಲಸಂಗ್ರಹಗಾರಕ್ಕೆ ಕಾಲುವೆಯಿಂದ ನೀರನ್ನು ಪಂಪ್ ಮಾಡಲು ಯಂತ್ರಗಳನ್ನು ಖರೀದಿಸಲು ಕೆ.ಯು.ಡಬ್ಲ್ಯೂ.ಎಸ್. & ಡಿ.ಬಿ ಇವರಿಗೆ ಹಣ ಪಾವತಿಸಲು | ರೂ.40.00 ಲಕ್ಷಗಳು |
| 7) | ಬಳ್ಳಾರಿ ನಗರದ ವ್ಯಾಪ್ತಿಯಲ್ಲಿ ಬರುವ ಸ್ಮಶಾನಗಳಿಗೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮೀಸಲಿಡತಕ್ಕದ್ದು. | ರೂ.11.09 ಲಕ್ಷಗಳು |

| | | |
|---|---|---|
| 8) | ಬಳ್ಳಾರಿ ಮಹಾನಗರಪಾಲಿಕೆಗೆ ಸರ್ಕಾರ ಆದೇಶ ಸಂ:ಪೌನಿ/ಸನಿ/ಸಾಂ/ಸಿಆರ್/18/ 2001-02, ದಿ:30.03.05 ರ ರಂತೆ ಸ್ಥಳೀಯ ಸಂಸ್ಥೆಗಳಿಗೆ ಒಳಚರಂಡಿ ವ್ಯವಸ್ಥೆ ಸುಗಮ ನಿರ್ವಹಣೆಗಾಗಿ ಎಲ್.ಸಿ.ವಿ.ಮೌಂಟೆಡ್ ಜೆಟ್ಟಿಂಗ್ ಮೀಷನ್ ಖರೀದಿಸಲು ಆದೇಶ ಹೊರಡಿಸಿದ್ದು, ಹಾಗೂ ಈಗಾಗಲೇ ಸಾಮಾನ್ಯ ಸಭೆಯು ಕೈಗೊಂಡ ತೀರ್ಮಾನ ಸಂ:992, ದಿ:06.08.2005 ರಲ್ಲಿ ಸದರಿ ಮಿಷನ್‌ನ ಬೆಲೆಯ ಬೈಕಿ ರೂ.10.00 ಲಕ್ಷಕ್ಕಿಂತ ಹೆಚ್ಚಿಗೆ ತಗಲುವ ವೆಚ್ಚವನ್ನು ಮಹಾನಗರಪಾಲಿಕೆಯಿಂದ ನಿಧಿಯಿಂದ ಭರಿಸಲು ಮಂಜೂರಾತಿ ನೀಡಲಾಗಿದ್ದು, ಕಾರಣ ಸದರಿ ಹಣವನ್ನು ಮಹಾನಗರಪಾಲಿಕೆಯ ನಿಧಿಯಿಂದ ಭರಿಸಲು ಸಾಧ್ಯವಾಗದೇ ಇರುವುದರಿಂದ ಸದರಿ ಹಣ ಅಂದಾಜು ರೂ.15.00 ಲಕ್ಷಗಳನ್ನು 2009-10 ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿಯಲ್ಲಿ ಭರಿಸಲು ಮೀಸಲಿಡತಕ್ಕದ್ದು. | ರೂ.15.00 ಲಕ್ಷಗಳು |
| 9) | ಬಳ್ಳಾರಿ ನಗರದ ರೇಣುಕಾ ನಗರ ಮುಖ್ಯ ರಸ್ತೆಗಳು ಹಾಗೂ ಅಡ್ಡರಸ್ತೆಗಳು ಮತ್ತು ಲಿಂಕ್ ರಸ್ತೆಗಳು ಅಭಿವೃದ್ಧಿಪಡಿಸುವ ಕಾಮಗಾರಿಗಳಿಗೆ ಮೀಸಲಿಡತಕ್ಕದ್ದು. | ರೂ.30.00 ಲಕ್ಷಗಳು |
| | ಒಟ್ಟು ರೂ. | **ರೂ. 368.09ಲಕ್ಷಗಳು** |

**(ಅ) ಉಳಿಕೆಯ ಅನುದಾನದಲ್ಲಿ ಶೇ 50 ರಷ್ಟು (ಒಟ್ಟು ಅನುದಾನದ ಶೇ 41) ಮೊತ್ತ ರೂ.371.55 ಲಕ್ಷಗಳು ತೆಗೆದು ಕೊಳ್ಳುವ ಕಾಮಗಾರಿಗಳ ವಿವರಣೆ**

| | | |
|---|---|---|
| 1) | ಬಳ್ಳಾರಿ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ:16 ರಿಂದ 35ರ ವರೆಗೆ ತಲಾ ವಾರ್ಡ್‌ಗಳಿಗೆ ರೂ.10.00 ಲಕ್ಷದಂತೆ ಸಿಮೆಂಟ್ ಕ್ರಾಂಕ್ರೀಟ್‌ನ ಆಂತರಿಕ ರಸ್ತೆಗಳು ನಿರ್ಮಿಸುವುದು.<br>20 ವಾರ್ಡ್‌ಗಳು x 10.00 ಲಕ್ಷಗಳು | ರೂ.200.00 ಲಕ್ಷಗಳು |
| 2) | ಬಳ್ಳಾರಿ ನಗರದ ವ್ಯಾಪ್ತಿಯಲ್ಲಿ ಅವಶ್ಯಕ ಕಾಮಗಾರಿ ಕೈಗೆತ್ತಿಕೊಂಡಿದ್ದರ ಬಿಲ್ ಪಾವತಿಸಲು ಕಾಯ್ದಿರಿಸುವ ಹಣ | ರೂ.175.00 ಲಕ್ಷಗಳು |
| | **ಒಟ್ಟು ರೂ.** | **ರೂ.375.00 ಲಕ್ಷಗಳು** |

**ಘೋಷ್ವಾರೆ**

| | | |
|---|---|---|
| 1. | 2008-09 ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿರುವ ಹಾಗೂ 2009-10 ರ ಸಾಲಿಗೆ ಮುಂದುವರೆದಿರುವ ಕಾಮಗಾರಿಗಳನ್ನು (Spillover works) ಪೂರ್ಣಗೊಳಿಸಲು ಅವಶ್ಯವಿರುವ ಅನುದಾನ | ರೂ. 529.06 ಲಕ್ಷಗಳು |
| 2. | ಶೇ 22.75ರ ಕಾಯ್ದಿರಿಸಿದ ಮೊತ್ತ ಒಟ್ಟು | ರೂ. 218.84 ಲಕ್ಷಗಳು |
| 3. | ಉಳಿಕೆಯ ಅನುದಾನದಲ್ಲಿ ಶೇ 50 ರಷ್ಟು (ಒಟ್ಟು ಅನುದಾನದ ಶೇ 41) ಮೊತ್ತ | ರೂ.368.09ಲಕ್ಷಗಳು |
| 4. | ಉಳಿಕೆಯ ಅನುದಾನದಲ್ಲಿ ಶೇ 50 ರಷ್ಟು (ಒಟ್ಟು ಅನುದಾನದ ಶೇ 41) ಮೊತ್ತ | ರೂ.375.00ಲಕ್ಷಗಳು |
| | **ಕ್ರಿಯಾ ಯೋಜನೆಯ ಒಟ್ಟು ಮೊತ್ತ** | **ರೂ.1490.99 ಲಕ್ಷಗಳು** |

ಮೇಲ್ಕಾಣಿಸಿದ ಕ್ರಿಯಾ ಯೋಜನೆ ತಯಾರಿಸಲಾಗಿದೆ. ಕಾರಣ ಮೇಲ್ಕಾಣಿಸಿದ ಕ್ರಿಯಾ ಯೋಜನೆ ಮತ್ತು ಅಂದಾಜು ಪಟ್ಟಿಗಳಿಗೆ ಅನುಮೋದನೆ ನೀಡಲು ಹಾಗೂ ಆಡಳಿತಾತ್ಮಕ ಮಂಜೂರಾತಿ ಮತ್ತು ತುರ್ತು ಟೆಂಡರ್ ಪ್ರಕಟಣೆಯ ಅನುಮತಿ ಪಡೆಯಲು ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಸಲ್ಲಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ಠರಾವು ಸಂಖ್ಯೆ:238:**

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ/16/ಎಸ್.ಎಫ್.ಸಿ./2009, ದಿನಾಂಕ:06.07.2009 ರಲ್ಲಿ ಪಾಲಿಕೆಯ ಸರಹದ್ದಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 2009–10ನೇ ಸಾಲಿಗೆ ಮಂಜೂರಿಸಿದ ಮುಕ್ತ ನಿಧಿ ಅನುದಾನ ರೂ.1490.99 ಲಕ್ಷಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/37/ಎಸ್.ಎಫ್.ಸಿ./2008, ದಿನಾಂಕ:06.07.2009 ರಲ್ಲಿ ಕೆಲವೊಂದು ಮಾರ್ಗ ಸೂಚಿಗಳಿಗೆ ಬದಲಾವಣೆ ಮಾಡಿ ಸೂಚಿಸಿದ ಮಾರ್ಗ ಸೂಚಿಗಳ ಪ್ರಕಾರ ಒಟ್ಟು ರೂ.1490.99 ಲಕ್ಷಗಳಿಗಾಗಿ ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವಂತೆ ತಯಾರಿಸಿದ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಮತ್ತು ಅಂದಾಜು ವೆಚ್ಚಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ಹಾಗೂ ಈ ಕಾಮಗಾರಿಗಳನ್ನು ಕೈಗೊಳ್ಳಲು ತುರ್ತು ಟೆಂಡರ್ ಪ್ರಕಟಣೆಯ ಅನುಮತಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

## ಮಹಾಪೌರರ ಅನುಮತಿಯಿಂದ ಬಂದ ವಿಷಯಗಳ ಕುರಿತು ಕೈಗೊಂಡ ತೀರ್ಮಾನಗಳು

**ವಿಷಯ ಸಂಖ್ಯೆ:239**

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (e-Goverenance) ಕರ್ನಾಟಕ ಸರ್ಕಾರ ಸಚಿವಾಲಯ, ಬೆಂಗಳೂರು ಇವರು ತಮ್ಮ ಅಧಿಸೂಚನೆ ಸಂ :ಡಿ.ಪಿ.ಎ.ಆರ್/20/ಇಜಿವಿ/2009 (4), ದಿನಾಂಕ:13.07.2009 ರಲ್ಲಿ ಕರ್ನಾಟಕ ಪಾರದರ್ಶಕತೆ ಕಾಯ್ದೆ 1999 ಅಧಿನಿಯಮ 18ಎ, ಸಬ್ ಸೆಕ್ಷನ್ (2)ರ ಅಡಿಯಲ್ಲಿ ರಾಜ್ಯದ 7 ಮಹಾನಗರ ಪಾಲಿಕೆಗಳಲ್ಲಿ ರೂ.10.00 ಲಕ್ಷ ಮತ್ತು ಅದರ ಮೇಲ್ಪಟ್ಟು ಮೊತ್ತಗಳಿಗೆ ಈ ಪ್ರಕ್ಯೂರ್‌ಮೆಂಟ್ ಪದ್ಧತಿಯಡಿಯಲ್ಲಿ ಟೆಂಡರ್‌ಗಳನ್ನು ಕಡ್ಡಾಯವಾಗಿ ದಿನಾಂಕ:01.08.2009 ರಿಂದ ಜಾರಿಗೊಳಿಸಿ ಆದೇಶಿಸಿರುವುದರಿಂದ ಸದರಿ ಪದ್ಧತಿಯನ್ನು ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ಠರಾವು ಸಂಖ್ಯೆ:239:**

ಈ ವಿಷಯವನ್ನು ಸಭೆ ಸರ್ವಾನುಮತದಿಂದ ಮುಂದೂಡಿತು.

**ವಿಷಯ ಸಂಖ್ಯೆ:240**

ಮಹಾನಗರಪಾಲಿಕೆಯ ಸಾರ್ವಜನಿಕ ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಜಿ.ಪದ್ಮಾವತಿ ಇವರು ತಮ್ಮ ಪತ್ರದಲ್ಲಿ ಇತ್ತೀಚೆಗೆ ದೇಶಾದ್ಯಂತ ಹೆಚ್–1, ಎನ್–1 ಹಂದಿ ಜ್ವರ ರೋಗವು ಕಾಣಿಸಿಕೊಂಡಿದ್ದು, ಇದು ದೇಶದ ಮುಖ್ಯ ನಗರಗಳಲ್ಲಿ ಬೆಳೆಯುತ್ತಿದೆ. ಈ ಕುರಿತು ಮಾನ್ಯ ಮಹಾಪೌರರು ದಿನಾಂಕ:11.08.2009 ರಂದು ಆರೋಗ್ಯ ಇಲಾಖೆ ಮತ್ತು ಮಹಾನಗರಪಾಲಿಕೆ ಆರೋಗ್ಯಾಧಿಕಾರಿಗಳ ಜೊತೆ ಸಭೆ ನಡೆಸಿ ಮುಖ್ಯವಾಗಿ ಈ ರೋಗವನ್ನು ಹತೋಟಿಯಲ್ಲಿಡಲು ನಗರ ಸ್ವಚ್ಛತೆ ಮಾಡುವುದು ಪಾಲಿಕೆ ಕರ್ತವ್ಯವಾಗಿರುವುದರಿಂದ ನಗರವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ದೊಡ್ಡ ಚರಂಡಿಗಳನ್ನು ಡೀಸಿಲ್ಟ್ ಮಾಡಲು ಸೂಚಿಸಿರುವುದಾಗಿ ತಿಳಿಸಿರುತ್ತಾರೆ.

1) ಈಡಿಗ ಹಾಸ್ಟಲ್‌ನಿಂದ ರಾಯಲ್ ವೃತ್ತದವರೆಗೆ ಇರುವ ದೊಡ್ಡ ಚರಂಡಿ 1ನೇ ನೈರ್ಮಲ್ಯ ವಿಭಾಗ.
2) ಬೆಂಗಳೂರು ರಸ್ತೆಯಿಂದ ಬ್ರಾಹ್ಮಣ ಬೀದಿ ಅಡ್ಡ ರಸ್ತೆವರೆಗೆ ಕಾಳಮ್ಮ ಬೀದಿ ಮುಖಾಂತರ ಆಂಧ್ರ ಬ್ಯಾಂಕ್‌ವರೆಗೆ. 1ನೇ ನೈರ್ಮಲ್ಯ ವಿಭಾಗ
3) ಕಮಲಮ್ಮ ಆಸ್ಪತ್ರೆಯಿಂದ ಬ್ರಾಹ್ಮಣ ಬೀದಿವರೆಗೆ 1ನೇ ವಿಭಾಗ
4) ರೇಷ್ಮೆ ಇಲಾಖೆಯಿಂದ ಸ್ಲಾಟರ್ ಹೌಸ್ ರಸ್ತೆ, ಬೆಂಗಳೂರು ಬೈಪಾಸ್ ರಸ್ತೆ 5ನೇ ನೈರ್ಮಲ್ಯ ವಿಭಾಗ.
5) ಹಳೇ ದಾರವಾಡ ರಸ್ತೆ ಯಲ್ಲಮ್ಮ ಗುಡಿಯಿಂದ ರಿಪಬ್ಲಿಕ್ ವೃತ್ತದವರೆಗೆ ದೇವಿನಗರ ಮರಾಠ ಗಲ್ಲಿ 1ನೇ ವಿಭಾಗ
6) ಲಾರಿ ಟರ್ಮಿನಲ್ ಬೆಂಗಳೂರು ರಸ್ತೆವರೆಗೆ 3ನೇ ನೈರ್ಮಲ್ಯ ವಿಭಾಗ

…26

ಮೇಲಿನ ದೊಡ್ಡ ಚರಂಡಿಗಳನ್ನು ಯುದ್ಧೋಪಾದಿಯಲ್ಲಿ ಸ್ವಚ್ಛಗೊಳಿಸುವ ಕ್ರಮ ಜರುಗಿಸುವ ಬಗ್ಗೆ ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

**ಠರಾವು ಸಂಖ್ಯೆ:240:**

ಕಛೇರಿ ಟಿಪ್ಪಣಿಯಲ್ಲಿ ಕಾಣಿಸಿರುವ ವಿವಿಧ ಪ್ರದೇಶಗಳಲ್ಲಿಯ ದೊಡ್ಡ ಚರಂಡಿಗಳಲ್ಲಿಯ ಹೂಳನ್ನು ಖಾಸಗಿ ಗುತ್ತಿಗೆದಾರರಿಂದ ತೆಗೆಯುವ ಬಗ್ಗೆ ಅಂದಾಜು ವೆಚ್ಚಗಳನ್ನು ತಯಾರಿಸಿ ಮಂಜೂರಾತಿಗಾಗಿ ಸಭೆಗೆ ಮಂಡಿಸಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ:241**

ಮಹಾನಗರಪಾಲಿಕೆ, ಬಳ್ಳಾರಿಯ 2009–10 ನೇ ಸಾಲಿನಲ್ಲಿ ಈ ಕೆಳಗಿನ ಬಡಾವಣೆಯಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ' ಈ ಕೆಳಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿ ಸದರಿ ಕಾಮಗಾರಿಯ ಅಂದಾಜು ವೆಚ್ಚಗಳಿಗೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲು ಸಭೆಗೆ ಮಂಡಿಸಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ವೆಚ್ಚ |
|---|---|---|
| 1 | ನಗರದ 8ನೇ ವಾರ್ಡಿನ ಆಂದ್ರಾಳ್ ಪ್ರದೇಶದ ಬಬ್ಬುಕುಂಟ ರಸ್ತೆಯಲ್ಲಿ ಸಾರ್ವಜನಿಕರ ಶೌಚಾಲಯ ನಿರ್ಮಾಣ | 805000 |
| 2 | ನಗರದ 8ನೇ ವಾರ್ಡಿನ ಆಂದ್ರಾಳ್ ಪ್ರದೇಶದ ವಂಕ ಹತ್ತಿರ ಸಾರ್ವಜನಿಕರ ಶೌಚಾಲಯ ನಿರ್ಮಾಣ | 805000 |
| 3 | ನಗರದ 9ನೇ ವಾರ್ಡಿನ ಆಂದ್ರಾಳ್ ಪ್ರದೇಶದ ಇಬ್ರಾಹಿಂಪ್ಪುರ ರಸ್ತೆ ಎಡಭಾಗದಲ್ಲಿ ಸಾರ್ವಜನಿಕರ ಶೌಚಾಲಯ ನಿರ್ಮಾಣ | 805000 |
| 4 | 10ನೇ ವಾರ್ಡ್ ವೆಂಕಟೇಶ್ವರ ಗುಡಿ ಮುಂಭಾಗದಲ್ಲಿ ಸಿ.ಸಿ.ನೆಲಹಾಸು ಮಾಡುವುದು | 435000 |

**ಠರಾವು ಸಂಖ್ಯೆ:241:**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಕಾಮಗಾರಿ ಕ್ರಮ ಸಂಖ್ಯೆ:1ರಿಂದ 4ರವರೆಗಿನ ಆಯಾ ಕಾಮಗಾರಿಗಳ ಮುಂದೆ ಕಾಣಿಸಿರುವ ಆಯಾ ಅಂದಾಜು ವೆಚ್ಚಗಳಿಗೆ ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿತು.

**ವಿಷಯ ಸಂಖ್ಯೆ:242:**

ಮಹಾನಗರಪಾಲಿಕೆ, ಬಳ್ಳಾರಿಯ ಶೇ 18ರಡಿಯಲ್ಲಿ ಪ.ಜಾ/ಪ.ಪಂಗಡದ ಬಡಜನರು ವಿವಿಧ ವ್ಯಾಧಿಗಳಿಂದ ನರಳುತ್ತಿದ್ದು, ಔಷದೋಪಚಾರಕ್ಕಾಗಿ ಆರ್ಥಿಕ ಸಹಾಯಕ್ಕಾಗಿ ಮಹಾನಗರಪಾಲಿಕೆಗೆ ಕೋರುತ್ತಿದ್ದು, ಅರ್ಜಿದಾರರು ಸಲ್ಲಿಸುತ್ತಿರುವ ವ್ಯಾಧಿಯು ಬೇರೆ–ಬೇರೆ ತರಹ ಇರುವುದರಿಂದ (ಉದಾರಹಣೆ :– ಕ್ಯಾನ್ಸರ್, ಕಿಡ್ನಿ ಚಿಕಿತ್ಸೆ, ಹೃದಯ ಚಿಕಿತ್ಸೆ ಹಾಗೂ ಇನ್ನಿತರ ವಿವಿಧ ವ್ಯಾದಿಗಳು) ಸದರಿ ಚಿಕಿತ್ಸೆಗಾಗಿ ಆರ್ಥಿಕ ಸಹಾಯ ಎಷ್ಟು ಪಾವತಿಸಬೇಕೆಂಬುದರ ಬಗ್ಗೆ ನಿಖರವಾದ ಮೊತ್ತವು ನಿಗಧಿಪಡಿಸಲು ಸಾಮಾನ್ಯ ಸಭೆಯ ಮುಂದೆ ಮಂಡಿಸಿದೆ.

**ಠರಾವು ಸಂಖ್ಯೆ:242:**

ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ವಿವಿಧ ವ್ಯಾದಿಗಳಿಂದ ನರಳುತ್ತಿರುವ ಪ.ಜಾತಿ/ಪ.ಪಂಗಡಕ್ಕೆ ಸೇರಿದ ಬಡಜನರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ತಗಲುವ ಒಟ್ಟು ವೆಚ್ಚದ ಪೈಕಿ ಶೇ 25 ರಷ್ಟು ಹಣವನ್ನು ಮಹಾನಗರಪಾಲಿಕೆಯಲ್ಲಿ ಶೇ 18ರಲ್ಲಿ ಕಾಯ್ದಿರಿಸಿದ ಹಣದಿಂದ ಪಾವತಿಸಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

…27

**ವಿಷಯ ಸಂಖ್ಯೆ:243:**

2009–10 ನೇ ಸಾಲಿನಲ್ಲಿ ಬಳ್ಳಾರಿ ಮಹಾನಗರಪಾಲಿಕೆ ವತಿಯಿಂದ ಈ ಕೆಳಗಿನ ಬಡಾವಣೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ನೀರು ಸರಬರಾಜು ನಿರ್ವಹಣೆಗಾಗಿ ಪೈಪ್‌ಲೈನ್ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ' ಈ ಕೆಳಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಧರದ ಪಟ್ಟಿಯಂತೆ ತಯಾರಿಸಲಾಗಿ, ಪ್ರಯುಕ್ತ ಸದರಿ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲು ಸಭೆಗೆ ಮಂಡಿಸಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ವೆಚ್ಚ |
|---|---|---|
| 1 | ಬಳ್ಳಾರಿ ನಗರದ 5ನೇ ವಾರ್ಡ್ ಕಾಟನ್ ಮಾರ್ಕೆಟ್ ಮೇಲ್ಪಟ್ಟ ಜಲಸಂಗ್ರಹಗಾರದಿಂದ ಹಾದು ಹೋಗುವ ಕೊಳವೆ ಮಾರ್ಗವನ್ನು ಬದಲಾಯಿಸಿ ಕಾಕರ್ಲತೋಟಕ್ಕೆ ನೀರು ಸರಬರಾಜು ನಿರ್ವಹಣೆಗಾಗಿ 160 ಎಂ.ಎಂ ಮತ್ತು 90 ಎಂ.ಎಂ. ವ್ಯಾಸದ ಪೈಪ್ ಲೈನ್ ಹಾಕುವುದು | 205000 |
| 2 | ಬಳ್ಳಾರಿ ನಗರದ 8ನೇ ವಾರ್ಡ್ ಕನೇಕಲ್ ರಸ್ತೆಯಲ್ಲಿರುವ ಗೋಶಾಲೆಗೆ ಸಮರ್ಪಕ ನೀರು ಸರಬರಾಜುಗಾಗಿ 90 ಎಂ.ಎಂ. ವ್ಯಾಸದ ಕೊಳವೆ ಮಾರ್ಗವನ್ನು ಹಾಕುವುದು | 252000 |
| 3 | ಬಳ್ಳಾರಿ ನಗರದ 10ನೇ ವಾರ್ಡ್ ಮರಿಸ್ವಾಮಿ ಮಠ, ಕುರುಬರೋಣಿ, ಇಲಾಹಿ ಮಸೀದಿ ಬೀದಿ, ತೇರು ಬೀದಿಗಳಲ್ಲಿರುವ ಕೊಳವೆ ಬಾವಿಗಳನ್ನು ಕೊರೆಯುವುದು ಹೂಳು ತುಂಬಿರುವ ಕೊಳವೆ ಬಾವಿಗಳನ್ನು ಮತ್ತೆ ಕೊರೆಯುವುದು ಮತ್ತು ಪ್ಲಾಟ್‌ಫಾರಂ ಕಟ್ಟುವುದು | 61000 |
| 4 | ಬಳ್ಳಾರಿ ನಗರದ 12ನೇ ವಾರ್ಡ್ ಶಂಕರಬಟ್ಟಿ ಪ್ರದೇಶದಲ್ಲಿ 90 ಎಂ.ಎಂ. ಮತ್ತು 110 ಎಂ.ಎಂ ವ್ಯಾಸದ ಕೊಳವೆ ಮಾರ್ಗವನ್ನು ಹಾಕುವುದು | 44000 |
| 5 | ಬಳ್ಳಾರಿ ನಗರದ 13ನೇ & 20 ನೇ ವಾರ್ಡ್‌ನಲ್ಲಿ ವಿವಿಧ ಪ್ರದೇಶಗಳಲ್ಲಿ ನೀರು ಸರಬರಾಜು ನಿರ್ವಹಣೆಗಾಗಿ 110 ಎಂ.ಎಂ. ಮತ್ತು 90 ಎಂ.ಎಂ ವ್ಯಾಸದ ಪಿವಿಸಿ ಕೊಳವೆ ಮಾರ್ಗವನ್ನು ಹಾಕುವುದು | 176000 |
| 6 | ಬಳ್ಳಾರಿ ನಗರದ 31 ಮತ್ತು 35 ನೇ ವಾರ್ಡಿನ ಈ ಕೆಳಕಾಣಿಸಿದ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯಕ್ಕಾಗಿ 160 ಮಿ.ಮೀ ಮತ್ತು 110 ಮಿ.ಮೀ ವ್ಯಾಸದ ಕೊಳವೆ ಸಾಲುಗಳನ್ನು ಅಳವಡಿಸುವುದು<br>1) ಸಿಮೆಂಟ್ ಕಾಂಕ್ರೀಟ್ ಜಂಕ್ಷನ್ ಸಿರುಗುಪ್ಪ ರಸ್ತೆಯಿಂದ ಲಕ್ಷ್ಮಿ ಹೋಟೆಲ್ ವರೆಗೆ, 2) ಇಂದಿರಾನಗರದ ಮುಖ್ಯರಸ್ತೆ | 295000 |
| 7 | ಬಳ್ಳಾರಿ ನಗರದ 35ನೇ ವಾರ್ಡಿನ ಅವಂಬಾವಿ ಪ್ರದೇಶದ ವಿವಿಧ ಭಾಗಗಳಲ್ಲಿ 90 ಮಿ.ಮೀ ವ್ಯಾಸದ ಕೊಳವೆ ಸಾಲುಗಳನ್ನು ಅಳವಡಿಸುವ ಕಾಮಗಾರಿ | 467000 |
| 8 | ಬಳ್ಳಾರಿ ನಗರದ 21ನೇ ವಾರ್ಡಿನ ಬದರಿನಾರಾಯಣ ಗುಡಿಯ 2ನೇ ಲಿಂಕ್ ರಸ್ತೆಯಲ್ಲಿ 90 ಎಂ.ಎಂ ವ್ಯಾಸದ ಪಿವಿಸಿ ಪೈಪ್‌ಲೈನ್ ಹಾಕುವ ಕಾಮಗಾರಿ | 25000 |

**ಠರಾವು ಸಂಖ್ಯೆ:243:**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಕಾಮಗಾರಿ ಕ್ರಮ ಸಂಖ್ಯೆ:1 ರಿಂದ 8ರವರೆಗಿನ ಆಯಾ ಕಾಮಗಾರಿಗಳ ಮುಂದೆ ಕಾಣಿಸಿರುವ ಆಯಾ ಅಂದಾಜು ವೆಚ್ಚಗಳಿಗೆ ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿತು.

**ವಿಷಯ ಸಂಖ್ಯೆ:244:**

2009–10 ನೇ ಸಾಲಿನಲ್ಲಿ ಬಳ್ಳಾರಿ ಮಹಾನಗರಪಾಲಿಕೆ ವತಿಯಿಂದ ಈ ಕೆಳಗಿನ ಬಡಾವಣೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಕೃತಿ ವಿಕೋಪ ನಿಧಿಯಡಿಯಲ್ಲಿ ನೀರು ಸರಬರಾಜು ನಿರ್ವಹಣೆಗಾಗಿ ಪೈಪ್‌ಲೈನ್ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ' ಟೆಂಡರನ್ನು ಕರೆಯಲಾಗಿದ್ದು, ಇದರ ಅಂಗವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಗುತ್ತಿಗೆದಾರರು ಕಾಮಗಾರಿಯ ಅಂದಾಜು ವೆಚ್ಚಕ್ಕೆ ಟೆಂಡರ್ ಧರವನ್ನು ನಮೂದಿಸಿರುರತ್ತಾರೆ. ಪ್ರಯುಕ್ತ ಸದರಿ ಕಾಮಗಾರಿಗಳ ಗುತ್ತಿಗೆದಾರರು ನೀಡಿದ ಟೆಂಡರ್ ಧರವನ್ನು ಸಾಮಾನ್ಯ ಸಭೆಯ ಮಂಜೂರಾತಿ ನಿರೀಕ್ಷಣೆ ಮೇರೆಗೆ ಪೂಜ್ಯ ಮಹಾಪೌರರು, ಅನುಮೋದನೆ ನೀಡಿರುತ್ತಾರೆ. ಆದ್ದರಿಂದ ಸದರಿ ಟೆಂಡರ್ ಧರವನ್ನು ಸಾಮಾನ್ಯ ಸಭೆಯ ಮಂಜೂರಾತಿಗಾಗಿ ಸಭೆಗೆ ಮಂಡಿಸಿದೆ.

| ಕ್ರ ಸಂ | ಕಾಮಗಾರಿ ಹೆಸರು | ಅಂದಾಜು ವೆಚ್ಚ | ಗುತ್ತಿಗೆದಾರರ ಹೆಸರು | ನಮೂದಿಸಿರುವ ಟೆಂಡರ್ ಧರ |
|---|---|---|---|---|
| 1 | ನಗರದ ವಾರ್ಡ್ ನಂ.33, ಸಿರುಗುಪ್ಪ ರಸ್ತೆಯ (ಮೇದಾರ್ ಓಣಿ) ರಿಬ್ಲಿಕ್ ಸರ್ಕಲ್ ನಿಂದ ಕುಟ್ಟಿ ಹೋಟೆಲ್ ವರೆಗೆ 160 ಎಂ.ಎಂ. ವ್ಯಾಸದ ಕೊಳವೆ ಸಾಲುಗಳನ್ನು ಹಾಕುವುದು | 155000 | ವಿ.ಸಿ.ತಿಮ್ಮಾರೆಡ್ಡಿ | ಅಂದಾಜು ವೆಚ್ಚಕ್ಕೆ |
| 2 | ನಾರಾಯಣರಾವ್ ಪಾರ್ಕ್‌ನಿಂದ ಬಿ.ಡಿ.ಎ ಗ್ರೌಂಡ್ ವರೆಗೆ (ಜಿ.ಎಲ್.ಎಸ್.ಆರ್) ವರೆಗೆ ಪೈಪ್ ಲೈನ್ ಕಾಮಗಾರಿ | 142000 | ವಿ.ಸಿ.ತಿಮ್ಮಾರೆಡ್ಡಿ | ಅಂದಾಜು ವೆಚ್ಚಕ್ಕೆ |
| 3 | ನಗರದ 29ನೇ ವಾರ್ಡಿನ ಬೆಳಗಲ್ ರಸ್ತೆಯ ಡಿ.ಸಿ ನಗರದ ಓವರ್ ಹೆಡ್ ಟ್ಯಾಂಕ್‌ನಿಂದ ಎಫ್.ಎಂ. ರೆಡಿಯೋ ಸ್ಟೇಷನ್ ವರೆಗೆ 90 ಎಂ.ಎಂ. ವ್ಯಾಸದ ಪಿವಿಸಿ ಕೊಳವೆ ಮಾರ್ಗವನ್ನು ಅಳವಡಿಸುವುದು | 368000 | ಅಬ್ದುಲ್ ಅಜೀಜ್ | ಅಂದಾಜು ವೆಚ್ಚಕ್ಕೆ |
| 4 | ನಗರದ ಹಳೆ ಬಸ್ ಸ್ಟ್ಯಾಂಡ್ ನಿಂದ ರೈಲ್ವೆ ವರೆಗೆ (ಡಬಲ್ ರೋಡ್) ವರೆಗೆ 110 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ | 105000 | ಬೊಬ್ಬಿಲಿ ಅಂಜಿನಿ | ಅಂದಾಜು ವೆಚ್ಚಕ್ಕೆ |
| 5 | ನಗರದ 6ನೇ ವಾರ್ಡಿನ ಕಾರ್ಕನಕುಂಟ ಜಂಕ್ಷನ್ ನಿಂದ ವೆಂಕಟಮ್ಮ ಕಾಲೋನಿ ವರೆಗೆ (ಬೆಂಗಳೂರು ರಸ್ತೆ) 160 ಎಂ.ಎಂ. ವ್ಯಾಸದ ಪಿವಿಸಿ ಕೊಳವೆ ಮಾರ್ಗವನ್ನು ಅಳವಡಿಸುವುದು | 190000 | ಬೊಬ್ಬಿಲಿ ಅಂಜಿನಿ | ಅಂದಾಜು ವೆಚ್ಚಕ್ಕೆ |
| 6 | ನಗರದ ಕೌಲ್ ಬಜಾರ್ ಪ್ರದೇಶದ 27ನೇ ವಾರ್ಡ್‌ನಲ್ಲಿರುವ ಬೈಪಾಸ್ ರಸ್ತೆಯಿಂದ ಮುಸ್ಲಿಂ ಸ್ಮಶಾನ ರಸ್ತೆಯಲ್ಲಿ ಮತ್ತು ಜಂಡಕಟ್ಟಾ ಪ್ರದೇಶದಲ್ಲಿ 90 ಎಂ.ಎಂ. ವ್ಯಾಸದ ಪವಿಸಿ ಕೊಳವೆ ಸಾಲುಗಳನ್ನು ಹಾಕುವುದು | 110000 | ಅಬ್ದುಲ್ ಅಜೀಜ್ | ಅಂದಾಜು ವೆಚ್ಚಕ್ಕೆ |
| 7 | ಬಳ್ಳಾರಿ ನಗರದ ಟಿ.ಬಿ.ಸ್ಯಾನಿಟೋರಿಯಂ ಹತ್ತಿರ ಇರುವ ಓವರ್ ಹೆಡ್ ಟ್ಯಾಂಕ್‌ಗೆ ಹೋಗುವ ನೀರಿನ ಪೈಪ್‌ಗೆ 500 ಎಂ.ಎಂ.ವ್ಯಾಸದ ಸೆಟ್ ಕಾಲರ್ ಸರಬರಾಜು ಮಾಡಿ ಜೋಡಣೆ ಮಾಡುವುದು | 17000 | ಅಬ್ದುಲ್ ಅಜೀಜ್ | ಅಂದಾಜು ವೆಚ್ಚಕ್ಕೆ |
| 8 | ಬಳ್ಳಾರಿ ನಗರದ ಟಿ.ಬಿ. ಸ್ಯಾನಿಟೋರಿಯಂ ಹತ್ತಿರ ಇರುವ 500 ಎಂ.ಎಂ. ವ್ಯಾಸದ ಪೈಪ್ ಲಿಕೇಜ್ ಸರಿಪಡಿಸುವ ಕಾಮಗಾರಿ | 53000 | ಅಬ್ದುಲ್ ಅಜೀಜ್ | ಅಂದಾಜು ವೆಚ್ಚಕ್ಕೆ |
| 9 | ನಗರದ 30 ನೇ ವಾರ್ಡಿನ ವಿನಾಯಕ ನಗರ ಮತ್ತು ಅಲ್ಲಿಪುರ ಬಡಾವಣೆಯಲ್ಲಿ ನೀರು ಸರಬರಾಜು ನಿರ್ವಹಣೆಗಾಗಿ 110 ಮತ್ತು 90 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವುದು | 696000 | ಅಬ್ದುಲ್ ಅಜೀಜ್ | ಅಂದಾಜು ವೆಚ್ಚಕ್ಕೆ |

…29

| | | | | |
|---|---|---|---|---|
| 10 | ನಗರದ 25 ವಾರ್ಡಿನ ಕೌಲ್ ಬಜಾರ್ ಪ್ರದೇಶದಲ್ಲಿ 110 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ | 100000 | ಅಬ್ದುಲ್ ಅಜೀಜ್ | ಅಂದಾಜು ವೆಚ್ಚಕ್ಕೆ |
| 11 | ನಗರದ ಮೊದಲನೇ ರೈಲ್ವೆ ಗೇಟ್ ನಿಂದ ಸ್ಟೆಡಿಯಂ ವರೆಗೆ ನೀರು ಸರಬರಾಜು ನಿರ್ವಹಣೆಗಾಗಿ 90 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ | 150000 | ಅಬ್ದುಲ್ ಅಜೀಜ್ | ಅಂದಾಜು ವೆಚ್ಚಕ್ಕೆ |
| 12 | ಬಳ್ಳಾರಿ ನಗರದ ಮಿಲ್ಲಾರ್ ಪೇಟೆಯ ಮೇಲೆತ್ತರದ ಜಲಸಂಗ್ರಹಗಾರದಿಂದ ಕೊನೆಯ ಭಾಗದ ಪ್ರದೇಶಗಳಾದ ರಾಣಿತೋಟ, ಆಂದ್ರಾಳ್ ರಸ್ತೆ ಮತ್ತು ಇನ್ನಿತರ ಪ್ರದೇಶಗಳಿಗೆ ನೀರು ಸರಬರಾಜು ಗೊಳಿಸುವ ಬಗ್ಗೆ | 31000 | ಎಸ್.ವೆಂಕಟಬಾಬು | ಅಂದಾಜು ವೆಚ್ಚಕ್ಕೆ |
| 13 | ನಗರದ 31 ನೇ ವಾರ್ಡಿನ ವಿವಿಧ ಪ್ರದೇಶಗಳಲ್ಲಿ ನೀರು ಸರಬರಾಜು ನಿರ್ವಹಣೆಗಾಗಿ ಕಾಮಗಾರಿಯನ್ನು ಕೈಗೊಳ್ಳುವುದು | 532000 | ಎಂ.ವೀರಾರೆಡ್ಡಿ | ಅಂದಾಜು ವೆಚ್ಚಕ್ಕಿಂತ 0.01 % ಕಡಿಮೆ |
| 14 | ನಗರದ ಟಿ.ಜಿಬಿ ಕಾಲೋನಿ, ಶಾಸ್ತ್ರಿನಗರ ಮತ್ತು 35ನೇ ವಾರ್ಡಿನಲ್ಲಿ ನೀರು ಸರಬರಾಜು ನಿರ್ವಹಣೆಗಾಗಿ 160 ಎಂ.ಎಂ. ಹಾಗೂ 90 ಎಂ.ಎಂ. ವ್ಯಾಸದ ಪಿವಿಸಿ ಪೈಪ್ ಲೈನ್ ಹಾಕುವುದು | 350000 | ಎ.ಸಿ.ಗುರುವಾರೆಡ್ಡಿ | ಅಂದಾಜು ವೆಚ್ಚಕ್ಕೆ |
| 15 | ಬಳ್ಳಾರಿ ನಗರದ 31 ನೇ ವಾರ್ಡಿನ ಕರಿಮಾರೆಮ್ಮ ಗುಡ್ಡದ ಮೇಲಿರುವ ಮದರ್ ಟ್ಯಾಂಕಿನ 2ನೇ ಕಂಪಾರ್ಟ್‌ಮೆಂಟ್‌ನ ನೀರು ಸೋರುವಿಕೆಯನ್ನು ತಡೆಗಟ್ಟುವುದು. | 1930000 | ಯರ್ರಿತಾತ ಅಸೋಸಿಯೇಷನ್, ಬಳ್ಳಾರಿ | ಅಂದಾಜು ವೆಚ್ಚಕ್ಕಿಂತ 1.31% ಕಡಿಮೆ |

**ಠರಾವು ಸಂಖ್ಯೆ:244:**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಕಾಮಗಾರಿ ಕ್ರಮ ಸಂಖ್ಯೆ:1 ರಿಂದ 15ರವರೆಗಿನ ಆಯಾ ಕಾಮಗಾರಿಗಳ ಮುಂದೆ ಕಾಣಿಸಿದ ಆಯಾ ಗುತ್ತಿಗೆದಾರರು ನಮೂದಿಸಿದ ಕಡಿಮೆ ಧರದ ಟೆಂಡರ್‌ಗಳನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ ಸಂಖ್ಯೆ:245:**

ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ನೀರು ಸರಬರಾಜು ಶಾಖೆ, ತಾಂತ್ರಿಕ ಶಾಖೆ, ಆರೋಗ್ಯ ಶಾಖೆ ಮತ್ತು ಕಂದಾಯ ಶಾಖೆಯಲ್ಲಿ ಕಛೇರಿ ಕೆಲಸಗಳು ಕುಂಠಿತಗೊಳ್ಳುತ್ತಿದ್ದು, ಹಾಗೂ ಪೈಪ್‌ಲೈನ್ ಕಾಮಗಾರಿಗಳಲ್ಲಿ ಕೆಲಸವನ್ನು ಮಾಡಲು ಕಷ್ಟಕರವಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ಒಟ್ಟು 220 ಜನ ಟಾಸ್ಕ್‌ವರ್ಕ್ ಕೆಲಸಗಾರರನ್ನು ಖಾಸಗಿ ಗುತ್ತಿಗೆ ಆಧಾರದಿಂದ ನೇಮಿಸಿಕೊಂಡು ವಿವಿಧ ಶಾಖೆಗಳಲ್ಲಿ ಹಾಗೂ ನೀರಿನ ಪೈಪ್‌ಲೈನ್ ಕಾಮಗಾರಿಗಳಿಗೆ ಸದರಿ ಕೆಲಸಗಾರರಿಂದ ಕೆಲಸವನ್ನು ತೆಗೆದುಕೊಳ್ಳಲಾಗುತ್ತಿದ್ದು, ಇವರುಗಳಿಗೆ ಡಿ.ಎಸ್.ಆರ್ ಧರದ ಪ್ರಕಾರ ಪ್ರತಿಯೊಬ್ಬರಿಗೆ ಪ್ರತಿ ದಿನಕ್ಕೆ ರೂ.142.75 ಗಳಂತೆ ಹಣವನ್ನು ಟಾಸ್ಕ್‌ವರ್ಕ್ ರಸೀದಿ ಮೂಲಕ ಪಾವತಿಸಲಾಗುತ್ತಿದ್ದು, ಇದನ್ನು ಅರಿತ ಪೂಜ್ಯ ಮಹಾಪೌರರು ಈ ರೀತಿ ಟಾಸ್ಕ್‌ವರ್ಕ್ ಕೆಲಸಗಾರರನ್ನು ನೇರವಾಗಿ ತೆಗೆದುಕೊಂಡು ಕೆಲಸ ಮಾಡಿಸಕೂಡದು ಹಾಗೂ ರಸೀದಿ ಮೂಲಕ ಹಣ ಪಾವತಿಸಬಾರದೆಂದು ಆಕ್ಷೇಪಸಿರುತ್ತಾರೆ. ಪ್ರಯುಕ್ತ ಸದರಿ ಕೆಲಸಗಾರರನ್ನು ಗುತ್ತಿಗೆ ಆಧಾರದ ಮೇರೆಗೆ ಕಛೇರಿಯಿಂದ ಷರತ್ತುಗಳನ್ನು ವಿಧಿಸಿ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಮೂಲಕ ಕೆಲಸದ ಅವಶ್ಯಕತೆ ಅನುಗುಣವಾಗಿ ಅಂದಾಜು 220 ಜನ ಕೆಲಸಗಾರರನ್ನು ತೆಗೆದುಕೊಂಡು ಅವರುಗಳಿಂದ ಕೆಲಸವನ್ನು ಕೈಗೊಳ್ಳಲು ಮತ್ತು ಇವರುಗಳಿಗೆ ಕೂಲಿಯನ್ನು ನೇರವಾಗಿ ಗುತ್ತಿಗೆದಾರರಿಗೆ ಪಾವತಿಸಲು ಕಛೇರಿ ಟಿಪ್ಪಣಿಯಲ್ಲಿ ಪೂಜ್ಯ ಮಹಾಪೌರರು ಸಭೆಗೆ ವಿಷಯ ಮಂಡಿಸುವಂತೆ ಸೂಚಿಸಿದ ಪ್ರಕಾರ ಈ ವಿಷಯವನ್ನು ಸಾಮಾನ್ಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

…30

**ಠರಾವು ಸಂಖ್ಯೆ:245:**

ಮಹಾನಗರಪಾಲಿಕೆಯ ವಿವಿಧ ಶಾಖೆಗಳಲ್ಲಿಯ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಅಗತ್ಯವಿರುವ 220 ಜನ ಕೆಲಸಗಾರರನ್ನು ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಮೂಲಕ ತೆಗೆದುಕೊಳ್ಳಲು ಅಂದಾಜು ವೆಚ್ಚ ಪಟ್ಟಿ ತಯಾರಿಸಿ ಮಂಜೂರಾತಿಗಾಗಿ ಸಾಮಾನ್ಯ ಸಭೆಗೆ ಮಂಡಿಸಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ:246:**

ಮಹಾನಗರಪಾಲಿಕೆ, ಬಳ್ಳಾರಿಯ 2009–10 ನೇ ಸಾಲಿನಲ್ಲಿ ಈ ಕೆಳಗಿನ ಬಡಾವಣೆಯಲ್ಲಿ ಅಭಿವೃದ್ದಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಈ ಕೆಳಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿ ಸದರಿ ಕಾಮಗಾರಿಯ ಅಂದಾಜು ವೆಚ್ಚಗಳಿಗೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲು ಸಭೆಗೆ ಮಂಡಿಸಿದೆ.

| ಕ್ರ ಸಂ | ಕಾಮಗಾರಿ ಹೆಸರು | ಅಂದಾಜು ವೆಚ್ಚ |
|---|---|---|
| 1 | ನಗರದ 17ನೇ ವಾರ್ಡಿನ ಬಿಸಿಲಹಳ್ಳಿ ಎಂಟ್ರನ್ಸ್ ಮಾರೆಮ್ಮ ಗುಡಿ ಹತ್ತಿರ ಸಿಮೆಂಟ್ ಕಾಂಕ್ರೀಟ್ ರಸ್ತೆ ಹಾಕುವುದು (ಉಳಿದ ಭಾಗ) | 705000 |
| 2 | ನಗರದ 35ನೇ ವಾರ್ಡಿನ ಅಲ್ಲಿಪುರ ಶಂಕರ್‌ತಾತ ಮಠದ ಹತ್ತಿರ ಆರ್.ಸಿ.ಸಿ ಡೆಕ್‌ಸ್ಲಾಬ್ ನಿರ್ಮಾಣ | 105000 |

**ಠರಾವು ಸಂಖ್ಯೆ:246:**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಕಾಮಗಾರಿ ಕ್ರಮ ಸಂಖ್ಯೆ: 1 ರಿಂದ 2ರವರೆಗಿನ ಆಯಾ ಕಾಮಗಾರಿಗಳ ಮುಂದೆ ಕಾಣಿಸಿರುವ ಆಯಾ ಅಂದಾಜು ವೆಚ್ಚಗಳಿಗೆ ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿತು.

**ವಿಷಯ ಸಂಖ್ಯೆ:247:**

2009–10ನೇ ಸಾಲಿನಲ್ಲಿ ಬಳ್ಳಾರಿ ನಗರಕ್ಕೆ ಟಿ.ಎಸ್.ಪಿ. ಅನುದಾನದಡಿ ರೂ.14.57 ಲಕ್ಷಗಳ ಹಂಚಿಕೆಯಾಗಿರುವುದನ್ನು ತಿಳಿಸುತ್ತಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಉಪವಿಭಾಗ, ಬಳ್ಳಾರಿ ಇವರು ತಮ್ಮ ಪತ್ರ ಸಂಖ್ಯೆ:185/2009–10ದಿನಾಂಕ:17–07–2009 ರಲ್ಲಿ ಪರಿಶಿಷ್ಠ ಪಂಗಡದ ಜನರು ವಾಸಿಸುವ ಬಡಾವಣೆಗಳಲ್ಲಿ ನೀರು ಸರಬರಾಜು ಅಥವಾ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಪ್ರಸ್ತಾವನೆಗಳನ್ನು ಸಲ್ಲಿಸಲು ಕೋರಿರುತ್ತಾರೆ. ಸದರಿ ಕಾಮಗಾರಿಗಾಗಿ ಸರಕಾರದಿಂದ ಮಂಡಳಿಗೆ ಹಣ ಬಿಡುಗಡೆಯಾಗುವದಾಗಿಯೂ ಹಾಗೂ ಕಾಮಗಾರಿಗಳನ್ನು ಮಂಡಳಿಯ ವತಿಯಿಂದ ನಿರ್ವಹಿಸುವದಾಗಿಯೂ ತಿಳಿಸಿರುತ್ತಾರೆ.

ಪ್ರಸ್ತುತವಾಗಿ, ನಗರದ ಬಳ್ಳಾರಪ್ಪ ಕಾಲೋನಿ ಹಾಗೂ ಗರೀಬ್ ನವಾಜ್ ಕಾಲೋನಿ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಅಲ್ಲದೆ ಸದರಿ ಪ್ರದೇಶದಲ್ಲಿ ವಾಸಿಸುವ ಜನರಲ್ಲಿ ಬಹುತೇಕ ಜನರು ಪರಿಶಿಷ್ಠ ಪಂಗಡಕ್ಕೆ ಸೇರಿದವರಾಗಿದ್ದು, ಅಲ್ಲಿ ಒಳಚರಂಡಿ ವ್ಯವಸ್ಥೆ ಮಾಡಿಕೊಡಲು ವಿನಂತಿಸಬಹುದಾಗಿದೆ. ಲಭ್ಯವಿರುವ ಅನುದಾನದಲ್ಲಿ ಸದರಿ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಕನನೀಸ ಮತ್ತು ಒಚ ಮಂಡಳಿಯವರನ್ನು ಕೋರಲು ತೀರ್ಮಾನಕ್ಕಾಗಿ ಸಭೆ ಮುಂದೆ ವಿಷಯವನ್ನು ಮಂಡಿಸಿದೆ.

**ಠರಾವು ಸಂಖ್ಯೆ:247:**

2009–10ನೇ ಸಾಲಿನಲ್ಲಿ ಟಿ.ಎಸ್.ಪಿ.ಅನುದಾನದಡಿ ಬಳ್ಳಾರಿ ನಗರಕ್ಕೆ ಹಂಚಿಕೆಯಾಗಿರುವ ರೂ.14.57 ಲಕ್ಷಗಳಿಂದ ನಗರದಲ್ಲಿ ಪರಿಶಿಷ್ಟ ಪಂಗಡದ ಹೆಚ್ಚು ಜನರು ವಾಸಿಸುವಂತಹ ಬಳ್ಳಾರಪ್ಪ ಕಾಲೋನಿ ಮತ್ತು ಗರೀಬ್ ನವಾಜ್ ಕಾಲೋನಿಗಳಲ್ಲಿ ಒಳಚರಂಡಿ ವ್ಯವಸ್ಥೆಯ ಕಾಮಗಾರಿಗಳನ್ನು ಕ.ನ.ನೀ.ಸ. ಮತ್ತು ಒಳಚರಂಡಿ ಮಂಡಳಿ, ಬಳ್ಳಾರಿ ಇವರಿಂದ ಕೈಗೊಳ್ಳಲು ಸಭೆ ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಿತು.

**ವಿಷಯ ಸಂಖ್ಯೆ:248:**

2009-10ನೇ ಸಾಲಿನಲ್ಲಿ ಬಳ್ಳಾರಿ ನಗರಕ್ಕೆ ಎಸ್.ಸಿ.ಪಿ. ಅನುದಾನದಡಿ ರೂ.108.33 ಲಕ್ಷಗಳ ಹಂಚಿಕೆಯಾಗಿರುವುದನ್ನು ತಿಳಿಸುತ್ತಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಉಪವಿಭಾಗ, ಬಳ್ಳಾರಿ ಇವರು ತಮ್ಮ ಪತ್ರ ಸಂಖ್ಯೆ:182/2009-10 ದಿನಾಂಕ: 17-07-2009 ರಲ್ಲಿ ಪರಿಶಿಷ್ಠ ಜಾತಿಯ ಜನರು ವಾಸಿಸುವ ಬಡಾವಣೆಗಳಲ್ಲಿ ನೀರು ಸರಬರಾಜು ಅಥವಾ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಪ್ರಸ್ತಾವನೆಗಳನ್ನು ಸಲ್ಲಿಸಲು ಕೋರಿರುತ್ತಾರೆ. ಸದರಿ ಕಾಮಗಾರಿಗಾಗಿ ಸರಕಾರದಿಂದ ಮಂಡಳಿಗೆ ಹಣ ಬಿಡುಗಡೆಯಾಗುವದಾಗಿಯೂ ಹಾಗೂ ಕಾಮಗಾರಿಗಳನ್ನು ಮಂಡಳಿಯ ವತಿಯಿಂದ ನಿರ್ವಹಿಸುವದಾಗಿಯೂ ತಿಳಿಸಿರುತ್ತಾರೆ.

ಪ್ರಸ್ತುತವಾಗಿ, ನಗರದ ಡಿ.ಸಿ.ನಗರ ಹಾಗೂ ಬಾಪೂಜಿ ನಗರ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಅಲ್ಲದೆ ಸದರಿ ಪ್ರದೇಶದಲ್ಲಿ ವಾಸಿಸುವ ಜನರಲ್ಲಿ ಬಹುತೇಕ ಜನರು ಪರಿಶಿಷ್ಠ ಜಾತಿಗೆ ಸೇರಿದವರಾಗಿದ್ದು, ಅಲ್ಲಿ ಒಳಚರಂಡಿ ವ್ಯವಸ್ಥೆ ಮಾಡಿಕೊಡಲು ವಿನಂತಿಸಬಹುದಾಗಿದೆ. ಲಭ್ಯವಿರುವ ಅನುದಾನದಲ್ಲಿ ಸದರಿ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಕನನೀಸ ಮತ್ತು ಒಚ ಮಂಡಳಿಯವರನ್ನು ಕೋರಲು ತೀರ್ಮಾನಕ್ಕಾಗಿ ಸಭೆ ಮುಂದೆ ವಿಷಯವನ್ನು ಮಂಡಿಸಿದೆ.

**ಠರಾವು ಸಂಖ್ಯೆ:248:**

2009-10ನೇ ಸಾಲಿನಲ್ಲಿ ಎಸ್.ಸಿ.ಪಿ. ಅನುದಾನದಡಿ ಬಳ್ಳಾರಿ ನಗರಕ್ಕೆ ಹಂಚಿಕೆಯಾಗಿರುವ ರೂ.108.33 ಲಕ್ಷಗಳಿಂದ ನಗರದಲ್ಲಿ ಪರಿಶಿಷ್ಟ ಜಾತಿಯ ಹೆಚ್ಚಿನ ಜನರು ವಾಸಿಸುವಂತಹ ಡಿ.ಸಿ.ನಗರ ಮತ್ತು ಬಾಪೂಜಿ ನಗರ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆಯ ಕಾಮಗಾರಿಗಳನ್ನು ಕ.ನ.ನೀ.ಸ ಮತ್ತು ಒಳಚರಂಡಿ ಮಂಡಳಿ, ಬಳ್ಳಾರಿ ಇವರಿಂದ ಕೈಗೊಳ್ಳಲು ಸಭೆ ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಿತು.

**ವಿಷಯ ಸಂಖ್ಯೆ:249:**

ಮಹಾನಗರಪಾಲಿಕೆ, ಬಳ್ಳಾರಿಯ 2009-10 ನೇ ಸಾಲಿನಲ್ಲಿ ಈ ಕೆಳಗಿನ ಬಡಾವಣೆಯಲ್ಲಿ ಅಭಿವೃದ್ದಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ' ಈ ಕೆಳಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿ ಸದರಿ ಕಾಮಗಾರಿಯ ಅಂದಾಜು ವೆಚ್ಚಗಳಿಗೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲು ಸಭೆಗೆ ಮಂಡಿಸಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ವೆಚ್ಚ |
|---|---|---|
| 1 | ನಗರದ 28ನೇ ವಾರ್ಡ್‌ನ ವಿವಿಧ ಪ್ರದೇಶಗಳಲ್ಲಿ ಸಿ.ಸಿ. ರಸ್ತೆ, ಸಿ.ಸಿ.ಚರಂಡಿ ಮತ್ತು ಕಲ್ಲುಕಟ್ಟಡ ಚರಂಡಿ ನಿರ್ಮಿಸುವುದು | 645000 |
| 2 | ನಗರದ 16ನೇ ವಾರ್ಡ್ ಎಸ್.ಆರ್.ಪಿ ಕಾಲೋನಿ ಶಾಲೆಯ ಹಿಂಭಾಗದಲ್ಲಿನ ನಿವಾಸಿಗಳಿಗೆ ಕಲ್ಲುಕಟ್ಟಡ ಚರಂಡಿ ನಿರ್ಮಿಸುವುದು | 735000 |
| 3 | ನಗರದ 32ನೇ ವಾರ್ಡ್ ಕೋಟೆ ಪ್ರದೇಶದಲ್ಲಿ ಉಳಿದ ಭಾಗಕ್ಕೆ ಸಿ.ಸಿ. ರಸ್ತೆ ನಿರ್ಮಿಸುವುದು | 215000 |
| 4 | ನಗರದ 32ನೇ ವಾರ್ಡ್, ಕೋಟೆ ಪ್ರದೇಶದ ಇಂಗ್ಲಿಷ್ ಚರ್ಚ್ ಹಿಂದುಗಡೆ ಉಳಿದ ಭಾಗಕ್ಕೆ ಸಿ.ಸಿ. ರಸ್ತೆ ನಿರ್ಮಿಸುವುದು | 214000 |
| 5 | ನಗರದ 35ನೇ ವಾರ್ಡಿನ ಶಾಸ್ತ್ರಿನಗರ ಬಡಾವಣೆ ಕೆ.ಎಸ್.ಆರ್.ಟಿ.ಸಿ ಡಿಪೋ ಹಿಂಭಾಗದಲ್ಲಿ ಸಾರ್ವಜನಿಕ ನಳಕ್ಕೆ ಸಿ.ಸಿ. ಪ್ಲಾಟ್ ಫಾರಂ ನಿರ್ಮಾಣ | 30000 |
| 6 | ನಗರದ 33ನೇ ವಾರ್ಡ್ ಶಿವಲಿಂಗ ನಗರದಲ್ಲಿ ಶಿಥಿಲಗೊಂಡ ಬಾವಿಯನ್ನು ಪುನರ್ ನಿರ್ಮಿಸಿ ಸುಸ್ಥಿತಿಗೆ ತರುವುದು | 1170000 |
| 7 | ನಗರದ 33ನೇ ವಾರ್ಡ್ ಶಿವಲಿಂಗ ನಗರ ಪ್ರದೇಶದಲ್ಲಿ ಹಾಲಿ ಇರುವ ಸಾಮೂಹಿಕ ಶೌಚಾಲಯ ಸುತ್ತಲೂ ಕಲ್ಲಿನ ಗೋಡೆಯನ್ನು ಕಟ್ಟುವುದು | 885000 |

**ಠರಾವು ಸಂಖ್ಯೆ:249:**

ಕಛೇರಿ ಟಿಪ್ಪಣಿಯಲ್ಲಿ ವಿವರಿಸಿರುವ ಕಾಮಗಾರಿ ಕ್ರಮ ಸಂಖ್ಯೆ:1 ರಿಂದ 7ರವರೆಗಿನ ಆಯಾ ಕಾಮಗಾರಿಗಳ ಮುಂದೆ ಕಾಣಿಸಿರುವ ಆಯಾ ಅಂದಾಜು ವೆಚ್ಚಗಳಿಗೆ ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿತು.

**ವಿಷಯ ಸಂಖ್ಯೆ:250:**

ಬಳ್ಳಾರಿ ಮಹಾನಗರಪಾಲಿಕೆಯಿಂದ ಹರಗಿನಡೋಣಿ ಗ್ರಾಮದ ಹತ್ತಿರ (ವೇಣಿವಿರಾಪುರ) ಇರುವ ಹೊಸದಾಗಿ ನಿರ್ಮಾಣ ಮಾಡುತ್ತಿರುವ ಕಾಂಪೋಸ್ಟ್ ಯಾರ್ಡಿನಲ್ಲಿ ಲ್ಯಾಂಡ್ ಫಿಲ್ ಪಿಟ್ ಕಸವನ್ನು ವಿಲೇವಾರಿ ಮಾಡುವ ಸಲುವಾಗಿ ಗುಂಡಿಯನ್ನು ತೆಗೆಯಲು ತಯಾರಿಸಿದ ಅಂದಾಜು ವೆಚ್ಚಕ್ಕೆ ಬಳ್ಳಾರಿ ಮಹಾನಗರಪಾಲಿಕೆಯ ಸಾಮಾನ್ಯ ಸಭೆಯು ದಿನಾಂಕ :15.06.2009 ರಂದು ಠರಾವು ಸಂಖ್ಯೆ :204 ರಲ್ಲಿ ರೂ.30,00,000/– ಗಳಿಗೆ ಮಂಜೂರಾತಿಯನ್ನು ನೀಡಿರುತ್ತದೆ.

ಸದರಿ ವಿಷಯದ ಕುರಿತು ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರುಗಳಿಗೆ ಪ್ರಸ್ತಾವನೆಯನ್ನು ಕಳುಹಿಸಿದ ಹಿನ್ನೆಲೆಯಲ್ಲಿ ಮಾನ್ಯ ನಿರ್ದೇಶಕರು ಸದರಿ ಕಾಮಗಾರಿಯನ್ನು ಬೆಳಗಾವಿ ಮಹಾನಗರಪಾಲಿಕೆಯು ನಿರ್ಮಿಸಿರುವ ಲ್ಯಾಂಡ್ ಫೀಲ್ ಪಿಟ್ ಮಾದರಿಯಂತೆ ನಿರ್ಮಾಣ ಮಾಡಲು ತಿಳಿಸಿರುವಂತೆ ಬಳ್ಳಾರಿ ಮಹಾನಗರಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಳಗಾವಿಗೆ ಹೋಗಿ ಲ್ಯಾಂಡ್ ಫಿಲ್ ಪಿಟ್ ಮಾದರಿಯನ್ನು ನೋಡಿ ಅದರ ಪ್ರಕಾರ ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ಸಿದ್ದಪಡಿಸಲಾಗಿ ಅಂದಾಜು ವೆಚ್ಚ ರೂ.39.90 ಲಕ್ಷಗಳಾಗಿದ್ದು, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಮತ್ತು ಹಣವನ್ನು ಬಿಡುಗಡೆ ಮಾಡುವಂತೆ ಮಾನ್ಯ ಪೌರಾಡಳಿತ ನಿರ್ದೇಶಕರಿಗೆ ಪತ್ರವನ್ನು ಕಳುಹಿಸಲಾಗಿತ್ತು. ಆದರೆ ಪೌರಾಡಳಿತ ನಿರ್ದೇಶಕರ ತಮ್ಮ ಪತ್ರ ಸಂ:ಪೌನಿ/ನಿನ/ಘವನಿ/ಬಳ್ಳಾರಿ/27/2004–05,ದಿನಾಂಕ :04.08.2009ರಲ್ಲಿ ತಿಳಿಸಿರುವಂತೆ ಮೇಲ್ಕಾಣಿಸಿದ ಕಾಮಗಾರಿಯ ಅಂದಾಜು ವೆಚ್ಚ ರೂ.39.90 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತಾರೆ. ಆದರೆ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಕಾರಣ ಹಿಂದೆ ಈ ಕಾಮಗಾರಿಗೆ ಮಹಾನಗರಪಾಲಿಕೆಯ ಸಾಮಾನ್ಯ ಸಭೆಯು ಠರಾವು ಸಂ :204, ದಿನಾಂಕ :15.06.2009 ರಲ್ಲಿ ರೂ.30.00 ಲಕ್ಷಗಳಿಗೆ ಮಂಜೂರಾತಿ ನೀಡಿದ್ದು, ಉಳಿದ ರೂ.9.90 ಲಕ್ಷಗಳಿಗೆ ಸಾಮಾನ್ಯ ಸಭೆಯ ಮಂಜೂರಾತಿ ನೀಡಬೇಕಾಗಿರುತ್ತದೆ. ಪ್ರಯುಕ್ತ ಸದರಿ ಕಾಮಗಾರಿಗೆ ಪೌರಾಡಳಿತ ನಿರ್ದೇಶಕರು ಮಂಜೂರಿಸಿದ ಅಂದಾಜು ವೆಚ್ಚಕ್ಕೆ ಕಡಿಮೆ ಬೀಳುವ ರೂ.9.90 ಲಕ್ಷಗಳನ್ನು ಮಂಜೂರಾತಿ ನೀಡಲು ಹಾಗೂ ಈ ಒಟ್ಟು ವೆಚ್ಚ ರೂ.39.90 ಲಕ್ಷಗಳನ್ನು ಬಳ್ಳಾರಿ ಮಹಾನಗರಪಾಲಿಕೆ ನಿಧಿಯಿಂದ ಭರಿಸಲು ಸಭೆಯ ಒಪ್ಪಿಗೆಗಾಗಿ ಸಭೆಯಲ್ಲಿ ಮಂಡಿಸಿದೆ.

**ಠರಾವು ಸಂಖ್ಯೆ:250:**

ಬಳ್ಳಾರಿ ಮಹಾನಗರಪಾಲಿಕೆಯಿಂದ ಹರಗಿನ ಡೋಣಿ ಗ್ರಾಮದ ಹತ್ತಿರ(ವೇಣಿವೀರಾಪುರ) ಹೊಸದಾಗಿ ನಿರ್ಮಾಣ ಮಾಡುತ್ತಿರುವ ಕಾಂಪೋಸ್ಟ್ ಯಾರ್ಡ್‌ನಲ್ಲಿ ಲ್ಯಾಂಡ್ ಫಿಲ್ ಪಿಟ್ ಕಸವನ್ನು ವಿಲೇವಾರಿ ಮಾಡುವ ಸಲುವಾಗಿ ಗುಂಡಿಯನ್ನು ತೆಗೆಯಲು ಕಛೇರಿ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ಮಾನ್ಯ ಪೌರಾಡಳಿತ ನಿರ್ದೇಶಕರು ತಮ್ಮ ಪತ್ರ ಸಂಖ್ಯೆ:ಪೌನಿ/ನಿನ/ಘವನಿ/ಬಳ್ಳಾರಿ/27/2004–05 ದಿನಾಂಕ:04.08.2009 ರಲ್ಲಿ ಅಂದಾಜು ವೆಚ್ಚ ರೂ.39.90 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತಾರೆ. ಈಗಾಗಲೇ ಈ ಕಾಮಗಾರಿಯ ಬಗ್ಗೆ ಮಹಾನಗರಪಾಲಿಕೆಯ ಸಾಮಾನ್ಯ ಸಭೆ ಠರಾವು ಸಂಖ್ಯೆ:204, ದಿನಾಂಕ:15.06.2009 ರಲ್ಲಿ ರೂ.30.00 ಲಕ್ಷಗಳಿಗೆ ಮಂಜೂರಾತಿ ನೀಡಿದ್ದು, ಮಾನ್ಯ ಪೌರಾಡಳಿತ ನಿರ್ದೇಶಕರು, ಮಂಜುರಾತಿ ನೀಡಿದ ಅಂದಾಜು ವೆಚ್ಚಕ್ಕೆ ಕಡಿಮೆ ಬೀಳುವ ರೂ.9.90ಲಕ್ಷಗಳಿಗೂ ಸಭೆ ಸರ್ವಾನುಮತದಿಂದ ಮಂಜೂರಾತಿಯನ್ನು ನೀಡಿ ಈ ಒಟ್ಟು ವೆಚ್ಚ ರೂ.39.90 ಲಕ್ಷಗಳನ್ನು ಎಸ್.ಎಫ್.ಸಿ. ಅನುದಾನದಲ್ಲಿ ಭರಿಸಲು ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಲಾಯಿತು.

**ಸಹಿ/–**
**(ಕೆ.ಬಸವರಾಜ್)**
**ಮಹಾಪೌರರು**
**ಬಳ್ಳಾರಿ ಮಹಾನಗರಪಾಲಿಕೆ,**
**ಬಳ್ಳಾರಿ**

**:: ನಿಜಪ್ರತಿ ::**

**ಆಯುಕ್ತರು**
**ಬಳ್ಳಾರಿ ಮಹಾನಗರಪಾಲಿಕೆ,**
**ಬಳ್ಳಾರಿ**

**ಇವರಿಗೆ,**

1) ಮಾನ್ಯ ಮಹಾಪೌರರು/ ಉಪಮಹಾಪೌರರು, ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ ಇವರಿಗೆ.
2) ಮಹಾನಗರಪಾಲಿಕೆಯ ನಾಲ್ಕು ಸ್ಥಾಯಿ ಸಮಿತಿಗಳ ಮಾನ್ಯ ಅಧ್ಯಕ್ಷರುಗಳಿಗೆ.
3) ಮಹಾನಗರಪಾಲಿಕೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.
4) ಸ್ಥಳೀಯ ಮಾನ್ಯ ಸಚಿವರುಗಳು ಹಾಗೂ ಮಾನ್ಯ ಶಾಸಕರುಗಳಿಗೆ.

**ಪ್ರತಿಯನ್ನು:**

1) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು ಇವರಿಗೆ ಸಲ್ಲಿಸಿದೆ.
2) ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಸಲ್ಲಿಸಿದೆ.
3) ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಸಲ್ಲಿಸಿದೆ.